ವಿಜಯಪುರ | ಸಂಪುಟ 01 | ಸಂಚಿಕೆ 266 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶನಿವಾರ ಡಿಸೆಂಬರ್ 16, 2023

"ಬೆಳಗಾವಿಯ ವಂಟಮೂರಿಯಲ್ಲಿ ನಡೆದ ಘಟನೆ ದೇಶಾದ್ಯಂತ ಚರ್ಚೆಗೊಳಪಟ್ಟಿದೆ. ಪರಿಶಿಷ್ಟ ಜಾತಿ ಮಹಿಳೆಯನ್ನು ಬೆತ್ತಲೆ ಮಾಡಿ, ಕಂಬಕ್ಕೆ ಕಟ್ಟಿ ಥಳಿಸಿದ್ದು ಖಂಡನಾರ್ಹ ಮತ್ತು ಖೇದಕರ. ಸಂತ್ರಸ್ಥೆಯನ್ನು ಮುಖ್ಯಮಂತ್ರಿಗಳು ಬೇಟಿಯಾಗದಿರುವುದು ಸರಿಯಲ್ಲ."

– ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು



ಸಹಕಾರಿ ಬ್ಯಾಂಕ್‌ಗಳಲ್ಲಿರುವ ಸಾಲ ಮರುಪಾವತಿ ಮಾಡಿದವರ ಬಡ್ಡಿ ಮಾತ್ರ ಮನ್ನಾ । ಸಿಎಂ ಸಿದ್ದರಾಮಯ್ಯ ಘೋಷಣೆ

# ರೈತರ ಸಾಲದ ಮೇಲಿನ ಬಡ್ಡಿ ಮನ್ನಾ :ಸಿಎಂ

ಬೆಂಗಳೂರು: ಸಹಕಾರಿ ಬ್ಯಾಂಕ್‌ಗಳ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬೆಳಗಾವಿಯ ಸುವರ್ಣ ಸೌಧದಲ್ಲಿ ಚಳಿಗಾಲ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ (ಡಿಸೆಂಬರ್ 15) ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಮಾತನಾಡಿದ ಸಿಎಂ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಕ್ಕೆ ಸಂಬಂಧಿಸಿದಂತೆ ಅವಧಿಯೊಳಗೆ ಸಾಲ ಮರುಪಾವತಿ ಮಾಡಿದವರ ಬಡ್ಡಿ ಮನ್ನಾ ಆಗಲಿದೆ ಎಂದು ತಿಳಿಸಿದ್ದಾರೆ.

"ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ನಾವು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರಲಿಲ್ಲ. ಆದರೂ ಮಾಡುತ್ತಿದ್ದೇವೆ. 2018ರ ವಿಧಾನಸಭೆ ಚುನಾವಣೆಗೂ ಮುನ್ನ ಬಿಜೆಪಿ ಪ್ರಣಾಳಿಕೆಯಲ್ಲಿ ರೈತರ 1 ಲಕ್ಷದವರೆಗಿನ ಸಾಲ ಮನ್ನಾ ಮಾಡುವುದಾಗಿ ಘೋಷಿಸಲಾಗಿತ್ತು. ಆದರೆ, ಬಳಿಕ ಬಂದ ಯಡಿಯೂರಪ್ಪ ಸರ್ಕಾರ ಯಾವುದೇ ಸಾಲ ಮನ್ನಾ ಮಾಡಿಲ್ಲ" ಎಂದು ಸಿಎಂ ಹೇಳಿದ್ದಾರೆ.

ಡಿಸೆಂಬರ್ 4ರಂದು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಪ್ರಾರಂಭಗೊಂಡ ವಿಧಾನಮಂಡಲದ ಚಳಿಗಾಲದ ಅಧಿವೇಶನ ಇಂದು(ಡಿ.15) ಕೊನೆಗೊಂಡಿದೆ.



## ಪ್ರತ್ಯೇಕ ರಾಜ್ಯದ ಬೇಡಿಕೆ ತಾರತಮ್ಯ ನಿವಾರಣೆಗೆ ಪರಿಹಾರ ಅಲ್ಲ :ಸಿಎಂ

ಬೆಂಗಳೂರು: ಸರ್ಕಾರ ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧವಾಗಿದ್ದು, ಪ್ರತ್ಯೇಕ ರಾಜ್ಯದ ಬೇಡಿಕೆ ಸಲ್ಲದು. ಅದು ತಾರತಮ್ಯ ನಿವಾರಣೆಗೆ ಪರಿಹಾರವೂ ಅಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಶುಕ್ರವಾರ ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಿಎಂ ಈ ಮಾತುಗಳನ್ನಾಡಿದರು.

ಪ್ರತ್ಯೇಕ ಕರ್ನಾಟಕಕ್ಕೆ ಒತ್ತಾಯ ಮಾಡುವುದು ಏಕೀಕರಣಕ್ಕೆ ಹೋರಾಡಿ, ಪ್ರಾಣ ತ್ಯಾಗ ಮಾಡಿದವರಿಗೆ ನಾವು ಮಾಡುವ ಅವಮಾನವಾಗಿದೆ. ಕರ್ನಾಟಕದ ಏಕೀಕರಣಕ್ಕಾಗಿ ಬಹಳಷ್ಟು ಜನರು ಹೋರಾಡಿದ್ದಾರೆ. ಭಾಷಾವಾರು ಪ್ರಾಂತ್ಯ ರಚನೆಯಾಗಲು ಹೋರಾಟ ಮಾಡಿದವರಿದ್ದಾರೆ ಎಂದು ಮುಖ್ಯಮಂತ್ರಿಗಳು ಸ್ಮರಿಸಿದರು.

ಕಿತ್ತೂರು ಕರ್ನಾಟದ 5 ತಾಲ್ಲೂಕುಗಳು ಸೇರಿದಂತೆ ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ಕೊಡಲಾಗುವುದು. ಕಲ್ಯಾಣ ಕರ್ನಾಟಕಕ್ಕೆ 2013–14 ರಿಂದ ಈವರೆಗೆ 14,877.36 ಕೋಟಿ ರೂ.ಗಳು ಮೀಸಲಿಡಲಾಗಿದೆ. ಬಿಡುಗಡೆಯಾಗಿದ್ದು 10,280 ಕೋಟಿ ರೂ. ಹಾಗೂ 8,330 ಕೋಟಿ ರೂ. ವೆಚ್ಚವಾಗಿದೆ. ಮುಂದಿನ ವರ್ಷದಿಂದ 5,000 ಕೋಟಿ ರೂ.ಗಳನ್ನು ಕಲ್ಯಾಣ ಕರ್ನಾಟಕಕ್ಕೆ ನೀಡಲಾಗುವುದು. ಮುಂಬೈ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ನೀಡಲಾಗುವುದು ಎಂದರು.

## ವಿಧಾನಸಭೆ ಕಲಾಪದ ಕೊನೆಯ ದಿನವಾದ ಇಂದು ಸಿಎಂ ಮಾಡಿದ ಹಲವು ಘೋಷಣೆಗಳು..

- ಸಹಕಾರ ಬ್ಯಾಂಕ್ ಗಳಲ್ಲಿರುವ ರೈತರ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಸಂಪೂರ್ಣ ಬಡ್ಡಿ ಮನ್ನಾ.
- ಬೆಳಗಾವಿ ಸಮೀಪ ಸುಮಾರು 2000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಸ್ಥಾಪನೆ ಹಾಗೂ ಬೆಳಗಾವಿ ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾ–ರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು.
- ಉತ್ತರ ಕರ್ನಾಟಕದ ಪ್ರವಾಸೋದ್ಯಮ ಅಭಿವೃದ್ಧಿಗೆ ಸಮಗ್ರ ಕ್ರಿಯಾ ಯೋಜನೆ ರೂಪಿಸಿ ಉದ್ಯೋಗಾವಕಾಶ ಸೃಷ್ಟಿಗೆ ಕ್ರಮ.
- ವಿಜಯಪುರದಲ್ಲಿ ಉತ್ಪಾದನಾ ಕ್ಲಸ್ಟರ್ ಅಂದಾಜು 1500 ಎಕರೆ ಪ್ರದೇಶದಲ್ಲಿ ಸ್ಥಾಪನೆ.
- ರಾಯಚೂರಿನಲ್ಲಿ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಒತ್ತು.
- ಧಾರವಾಡ ಸಮೀಪ ಸುಮಾರು 3000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಸ್ಥಾಪನೆ.
- ಧಾರವಾಡದಲ್ಲಿರುವ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ ಉನ್ನತೀಕರಣ.

ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ ಪ್ರಕರಣ

# ಸರ್ಕಾರದ ವಿರುದ್ಧ ಬಿಜೆಪಿ ಧರಣಿ

ಬೆಳಗಾವಿ: ತಾಲೂಕಿನ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಿರುವ ಅಮಾನವೀಯ ಘಟನೆ ವಿಚಾರವನ್ನು ಸದನಲ್ಲಿ ಚರ್ಚಿಸುವಂತೆ ಬಿಜೆಪಿ ಹೈಕಮಾಂಡ್ ಸೂಚಿಸಿದ್ದು, ಸರ್ಕಾರದ ವಿರುದ್ಧ ಪ್ರತಿಭಟನೆಗೆ ಬಿಜೆಪಿ ಮುಂದಾಗಿದೆ.

ಈ ಕುರಿತು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಬೆಳಗಾವಿಯ ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆ ದೇಶಾದ್ಯಂತ ಚರ್ಚೆ ಚರ್ಚೆಗೆ ಒಳಪಟ್ಟಿದೆ. ಪರಿಶಿಷ್ಟ ಜಾತಿ ಮಹಿಳೆಯನ್ನು ಬೆತ್ತಲೆ ಮಾಡಿ ಕಂಬಕ್ಕೆ ಕಟ್ಟಿ ಹಾಕಿ ಥಳಿಸಿದ್ದು ಖಂಡನಾರ್ಹ ಮತ್ತು ಖೇದಕರ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕರಾದ ಬಿ.ವೈ.ವಿಜಯೇಂದ್ರ ಅವರು ತಿಳಿಸಿದರು.




ಘಟನೆ ಸಂತ್ರಸ್ತೆಯನ್ನು ಮುಖ್ಯಮಂತ್ರಿಗಳು ಭೇಟಿ ಮಾಡಿಲ್ಲ. ಗೃಹ ಸಚಿವರು ಹೊರತುಪಡಿಸಿ ಬೇರೆ ಯಾರೂ ಭೇಟಿ ಕೊಟ್ಟಿಲ್ಲ. ನಿನ್ನೆ ದಿನ ಹೈಕೋರ್ಟ್, ರಾಜ್ಯ ಸರಕಾರಕ್ಕೆ ಚಾಟಿ ಬೀಸಿದೆ. ಯಾಕೆ ಸರಕಾರ ಇದು ನಡೆಯಲು ಬಿಟ್ಟಿದೆ? ಪೊಲೀಸ್ ಗಸ್ತು ಯಾಕೆ ಇರಲಿಲ್ಲ? ರಾಜ್ಯ ಸರಕಾರ ಇಂಥ ಘಟನೆ ಆಗದಂತೆ ತಡೆಯಲು ಏನು ಕ್ರಮ ಕೈಗೊಂಡಿದೆ? ಎಂದು ಪ್ರಶ್ನಿಸಿದರು.


ಸಂತ್ರಸ್ತೆಯ ಸಹಾಯಕ್ಕೆ ಧಾವಿಸದ ಕುರಿತು ಪಕ್ಷ ಚಾಟಿ ಬೀಸಿದೆ. ಆದರೂ, ರಾಜ್ಯ ಸರಕಾರವು ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಜನರಿಗೂ ಅನಿಸಿದೆ. ಈ ಘಟನೆಯನ್ನು ಖಂಡಿಸಿ ನಾಳೆ ದಿನ ಬಿಜೆಪಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ದೊಡ್ಡ ಪ್ರತಿಭಟನೆ ನಡೆಸಲಿದೆ. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ. ಇವತ್ತು ಸಹ ಅಧಿವೇಶನ ಮುಗಿದ ಬಳಿಕ ಬೆಳಗಾವಿ ಚೆನ್ನಮ್ಮ ವೃತ್ತದಲ್ಲಿ ನಮ್ಮ ಪಕ್ಷದ ಮುಖಂಡರು, ಹಿರಿಯರು ಪ್ರತಿಭಟನೆ ನಡೆಸುತ್ತೇವೆ ಎಂದು ಪ್ರಕಟಿಸಿದರು.

ನಾಳೆ ಕೇಂದ್ರದಿಂದ ಒಂದು ತಂಡವು ಬೆಳಗಾವಿಗೆ ಭೇಟಿ ಕೊಡಲಿದೆ. ಸಂಸದರಾದ ಅಪರಾಜಿತ್ ಸಾರಂಗಿ, ಸುನಿತಾ ದುಗ್ಗಲ್, ರಂಜಿತಾ ಕೋಷ್ಲಿ, ಲಾಕೆಟ್ ಚಟರ್ಜಿ ಅಲ್ಲದೆ ಕೇಂದ್ರ ಸಚಿವೆ ಆಶಾ ಲಾಕ್ಡಾ ಅವರು ಸಂತ್ರಸ್ತೆಯನ್ನು ಭೇಟಿ ಮಾಡುತ್ತಾರೆ. ಈ ವಿಷಯವನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದೆ. ರಾಜ್ಯದಾದ್ಯಂತ ಪ್ರತಿಭಟನೆಗೆ ಮುಂದಾಗಿದೆ ಎಂದು ತಿಳಿಸಿದರು.

### ರಾಜ ನುಡಿ

ಮನುಷ್ಯನ ಸಾವಿರಾರು ವರ್ಷಗಳ ಇತಿಹಾಸವನ್ನು ಅವಲೋಕಿಸಿದಾಗ, ಉಳಿದದ್ದು ಕೇವಲ ವಿಚಾರಗಳೆ ಹೊರತು ಯಾವುದೆ ವೈಭವ, ವೈಭೋಗಗಳು ಅಲ್ಲವೆ ಅಲ್ಲ.

-ಡಾ. ರಾಜಶೇಖರ ನಾಗೂರ



### ವಚನ ಚಿಂತನ 256

*ಲಿಂಗವ ಪೂಜಿಸಿ ಫಲವೇನಯ್ಯಾ,*

*ಲಿಂಗವ ಪೂಜಿಸಿ ಫಲವೇನಯ್ಯಾ,*
*ಸಮರತಿ ಸಮಕಳೆ ಸಮಸುಖವನ–*
*ರಿಯದನ್ನಕ್ಕ ?*
*ಲಿಂಗವ ಪೂಜಿಸಿ ಫಲವೇನಯ್ಯಾ,*
*ಕೂಡಲಸಂಗಮದೇವರ ಪೂಜಿಸಿ*
*ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ ?*
*– ಬಸವಣ್ಣನವರು*

ಯಾವುದು ನಮ್ಮ ಇಷ್ಟಲಿಂಗಪೂಜೆಯ ಅಂತಿಮ ಸ್ಥಿತಿಯಾಗಬೇಕೆಂದು ಬಸವಣ್ಣನವರು ನಮಗೆಲ್ಲ ತಿಳಿಸುತ್ತಾ, ನದಿಯೊಳಗೆ ನದಿ ಬೆರತಂತೆ ನಮ್ಮೊಳಗಿನ ಚೈತನ್ಯ (ಪ್ರಾಣಲಿಂಗವು) ಬ್ರಹ್ಮಾಂಡದಲ್ಲಿಯ ಚೈತನ್ಯ (ಮಹಾಲಿಂಗ) ದೊಂದಿಗೆ ಬೆರೆಯಬೇಕು ಅಂದರೆ ಎರಡು ನದಿಗಳು ಬೆರೆತಾಗ ಹೇಗೆ ಭಿನ್ನವಾಗಿರಲು ಸಾದ್ಯವಿಲ್ಲವೊ ಹಾಗೆ ನಮ್ಮ ಅಂಗ ಮತ್ತು ಲಿಂಗಗಳು ಬೆರೆಯಬೇಕು ಅದು ಲಿಂಗಾನುಸಂಧಾನ ಲಿಂಗಾಂಗಯೋಗ ಅದೆ ನೈಜ ಲಿಂಗಪೂಜೆ, ಅದು ಸಮರತಿ, ಸಮಕಳೆ ಸಮಸುಖವನು ನೀಡುವಂತಿರಬೇಕು ಲಿಂಗಪೂಜೆಯ ಫಲ ಏಕಮುಖವಾಗಿರದೆ ಸಮವಾಗಿರಬೆಕೆಂದಿದ್ದಾರೆ. ಹೀಗಾಗದಿದ್ದರೆ ಲಿಂಗವಪೂಜಿಸಿ ಫಲವಿಲ್ಲ ಎಂದಿರುವರು. ಅಂತಾಗಬೇಕು ನಮ್ಮ ಲಿಂಗಪೂಜೆ ಆದರೆ ಇಂದು ನಮ್ಮ ಲಿಂಗಪೂಜೆಯು ಹೇಗಿದೆಂಬುದನ್ನು ಆತ್ಮವಿಮರ್ಷೆಮಾಡಿಕೊಳ್ಳುವ ಕಾಲವಿದು.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಸೆಕ್ಯೂರಿಟಿ ಗಾರ್ಡ ಮೇಲೆ ಹಲ್ಲೆಗೈದು ಮನೆ ದೋಚಿದ ಕಳ್ಳರು

ಉದಯರಶ್ಮಿ ನ್ಯೂಸ್

ವಿಜಯಪುರ: ಸೆಕ್ಯೂರಿಟಿ ಗಾರ್ಡ ಮೇಲೆ ಹಲ್ಲೆಗೈದು ಮನೆ ನುಗ್ಗಿದ ಕಳ್ಳರು ಚಿನ್ನ, ನಗದು ದೋಚಿ ಫರಾರಿಯಾಗಿರುವ ಘಟನೆ ವಿಜಯಪುರ ನಗರದ ಮಹಾವೀರ ಕಾಲೋನಿಯಲ್ಲಿ ನಡೆದಿದೆ.

ಗುಲಾಬ್ ಮುಹಮ್ಮದ್ ಮುಜಾವರ ಹಲ್ಲೆಗೊಳಗಾದ ಸೆಕ್ಯೂರಿಟಿ ಗಾರ್ಡ ಆಗಿದ್ದಾರೆ.

ಇನ್ನು ಶ್ರೀಕಾಂತ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ.

ಶ್ರೀಕಾಂತ ಕುಟುಂಬದವರು ಮದುವೆಗೆಂದು ಹೋದಾಗ ಈ ಕೃತ್ಯ ನಡೆದಿದೆ. ಕಳ್ಳರು ಮನೆಗೆ ನುಗ್ಗಲು ಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ ಅವರನ್ನು ತಡೆಯಲು ಯತ್ನಿಸಿದ ಸೆಕ್ಯೂರಿಟಿ ಗಾರ್ಡ ಗುಲಾಬ್ ಮುಹಮ್ಮದ್ ಮೇಲೆ ಮಾರಕಾಸ್ತ್ರಗಳಿಂದ ದಾಳಿಗೈದು ಮನೆಯಲ್ಲಿದ್ದ ಚಿನ್ನ, ನಗದು ಹಾಗೂ ಬೆಲೆ ಬಾಳುವ ವಸ್ತುಗಳನ್ನು ದೋಚಿಕೊಂಡು ಫರಾರಿಯಾಗಿದ್ದಾರೆ.

ತೀವ್ರ ಗಾಯಗೊಂಡಿರುವ ಸೆಕ್ಯೂರಿಟಿ ಗಾರ್ಡ ಗುಲಾಬ್ ಮುಹಮ್ಮದ್ ರನ್ನು ವಿಜಯಪುರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಎಪಿಎಂಸಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.



ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕ ವಿಜಯ ಮೆಕ್ಕಳಕಿ ಬಬಲೇಶ್ವರ ಭೇಟಿ

# ಗುಣಮಟ್ಟದ ಕಾಮಗಾರಿಗೆ ಗುತ್ತಿಗೆದಾರರಿಗೆ ಸೂಚನೆ

ಉದಯರಶ್ಮಿ ನ್ಯೂಸ್

ಬಬಲೇಶ್ವರ: ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕ ವಿಜಯ ಮೆಕ್ಕಳಕಿ ಬುಧವಾರ ಬಬಲೇಶ್ವರ ಪಟ್ಟಣ ಪಂಚಾಯತ ಕಾರ್ಯಾಲಯಕ್ಕೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು.

ಪಟ್ಟಣದಲ್ಲಿ ನಡೆಯುತ್ತಿರುವ ವಿವಿಧ ಯೋಜನೆಗಳ ಕಾಮಗಾ–ರಿಗಳನ್ನು ಪರಿಶೀಲಿಸಿ ಗುಣಮಟ್ಟದ ಕಾಮಗಾರಿ ನಿರ್ವಹಿಸಲು ಗುತ್ತಿಗೆದಾರ–ರಿಗೆ ಸೂಚನೆ ನೀಡಿ ಆರಂಭ ಮಾಡದ ಕಾಮಗಾರಿಗಳನ್ನು ಪ್ರಾರಂಭಿಸಿ ನಿಗದಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಿದರು.



ಕಛೇರಿಯಲ್ಲಿ ಎಲ್ಲಾ ಸಿಬ್ಬಂದಿಗಳ ಸಭೆ ನಡೆಸಿ ಸರಿಯಾಗಿ ಕೆಲಸ ನಿರ್ವಹಿಸಬೇಕು. ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು. ಕಾಲಮಿತಿಯೊಳಗೆ ಕೆಲಸ ಮಾಡಬೇಕು. ಪಟ್ಟಣದಲ್ಲಿ ಸ್ವಚ್ಚತೆ ಕಾಪಾಡಲು ಹಾಗೂ ಟ್ರೇಡ ಲೈಸನ್ಸ ಶೇ 100 ರಷ್ಟು ಕಿರಿಯ ಆರೋಗ್ಯ ನೀರಿಕ್ಷರು ವಸೂಲಿ ಮಾಡಬೇಕು. ಕಂದಾಯ ವಸೂಲಿಯಲ್ಲಿ ಶೇ 100 ರಷ್ಟು ಸಾಧಿಸಬೇಕು. ಸಾರ್ವಜನಿಕ ಆಸ್ತಿಗಳ ಡಿಜಿಟಲಿಕರಣ ಕೆಲಸ ಡಿಸೆಂಬರ್ ಅಂತ್ಯದವರೆಗೆ ಪೂರ್ಣಗೊಳಿಸಬೇಕು. ಕಾರ್ಯಾಲಯದ ನೀರು ಸರಬರಾಜು ಸಿಬ್ಬಂದಿಗಳಿಗೆ ಪಟ್ಟಣದಲ್ಲಿ ಯಾವುದೇ ರೀತಿಯ ನೀರಿನ ತೊಂದರೆಯಾಗದಂತೆ ಕೆಲಸ ನಿರ್ವಹಿಸಬೇಕು. ತೆ–ರಿಗೆ ವಸೂಲಿಯಲ್ಲಿ ಕಂದಾಯ ವಿಭಾಗದ ಸಿಬ್ಬಂದಿಗಳಿಗೆ ಸಹಕಾರ ನೀಡಬೇಕು. ವಸತಿ ಯೋಜನೆಯಲ್ಲಿ ಪ್ರಗತಿ ಸಾಧಿಸಲು ಸಂಬಂಧಿಸಿದ ಸಿಬ್ಬಂದಿಗೆ ಸೂಚನೆ ನೀಡಿದರಲ್ಲದೇ, ಪಟ್ಟಣದಲ್ಲಿರುವ ಕುಡಿಯುವ ನೀರಿನ ಟ್ಯಾಂಕಗಳನ್ನು ಪರಿಶೀಲಿಸಿ, ಕಾಲಕಾಲಕ್ಕೆ ಸ್ವಚ್ಚತೆ ಮಾಡಬೇಕು ಎಂದರು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ರುದ್ರಗೌಡ ಸೋಲಾಪುರ, ಸಿಬ್ಬಂದಿ ಇದ್ದರು.

# ಟೈಯರ್ ಸಿಡಿದು ಖಾಸಗಿ ಬಸ್ಸಿಗೆ ಬೆಂಕಿ




ಉದಯರಶ್ಮಿ ನ್ಯೂಸ್

ವಿಜಯಪುರ: ಟೈಯರ್ ಬ್ಲಾಸ್ಟ್ ಆಗಿ ಏಕಾಏಕಿ ಜನತಾ ಟ್ರಾವೆಲ್ಸ್‌ಗೆ ಸೇರಿದ ಬಸ್ ಸುಟ್ಟು ಭಸ್ಮವಾಗಿರುವ ಘಟನೆ ವಿಜಯಪುರ ತಾಲೂಕಿನ ಹಿಟ್ಟಿನಹಳ್ಳಿ ಬಳಿ ನಡೆದಿದೆ.

ಈ ಬಸ್ ಬೆಂಗಳೂರಿಂದ ವಿಜಯಪುರಕ್ಕೆ ಬರುತ್ತಿದ್ದಾಗ ಬಸ್ ಟೈಯರ್ ಬ್ಲಾಸ್ಟ್ ಆಗಿದೆ. ಟೈರ್ ಬ್ಲಾಸ್ಟ್ ಆಗುತ್ತಿದ್ದಂತೆ ಪ್ರಯಾಣಿಕರು ಕೆಳಗೆ ಇಳಿದು ಸೇಫ್ ಆಗಿದ್ದಾರೆ. ಆದರೆ ಪ್ರಯಾಣಿಕರ ಎಲ್ಲ ಲಗೇಜ್ ಬೆಂಕಿಗಾಹುತಿ ಆಗಿವೆ. ಬೆಲೆಬಾಳುವ ವಸ್ತುಗಳು, ಬಟ್ಟೆಗಳು, ನಗದು, ಒಡವೆ ಭಸ್ಮವಾಗಿವೆ.

ಸ್ಥಳಕ್ಕೆ ಅಗ್ನಿ ಶಾಮಕ ಸಿಬ್ಬಂದಿಗಳು ಭೇಟಿ ನೀಡಿ ಬೆಂಕಿ ನಂದಿಸಿದರು.

ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

## ಪುರಸಭೆ ಉಪಚುನಾವಣೆ: ಆಪ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ



ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲೆಯ ಮುದ್ದೇಬಿಹಾಳ ಪುರಸಭೆ ಉಪಚುನಾವಣೆಯ ವಾರ್ಡ್ ನಂ: 18 ರಲ್ಲಿ ಆಮ್ ಆದ್ಮಿ ಪಾರ್ಟಿ ಅಭ್ಯರ್ಥಿಯನ್ನ ಕಣಕ್ಕಿಳಿಸಿದ್ದು ಶುಕ್ರವಾರ ನಾಮಪತ್ರ ಸಲ್ಲಿಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಆಮ್ ಆದ್ಮಿ ಪಾರ್ಟಿ ವಿಜಯಪುರ ಜಿಲ್ಲಾಧ್ಯಕ್ಷ ಭೋಗೇಶ್ ಸೋಲಾಪುರ್, ಬಬಲೇಶ್ವರ್ ಮತಕ್ಷೇತ್ರದ ಉಸ್ತುವಾರಿ ಬಾಬು ಬಿಜಾಪುರ, ನಾಗಠಾಣ್ ಮತಕ್ಷೇತ್ರದ ಉಸ್ತುವಾರಿ ಅವಿನಾಶ್ ಐಹೊಳೆ, ಮುದ್ದೇಬಿಹಾಳ ಮತಕ್ಷೇತ್ರದ ಉಸ್ತುವಾರಿ ಮೆಹಬೂಬ್ ಹಡಲಗೇರಿ ಹಾಗೂ ಜಿಲ್ಲಾ ಯುವ ಘಟಕದ ಉಪಾಧ್ಯಕ್ಷ ಇಂದ್ರಜಿತ್ ಜಾಧವ್, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಪಾಕಸ್ಪರ್ಧೆ: ಜಿಲ್ಲೆಯ ವಿವಿಧ ಭಾಗದ ಮಹಿಳೆಯರು ಭಾಗಿ

ಉದಯರಶ್ಮಿ ನ್ಯೂಸ್

ವಿಜಯಪುರ: ಕೃಷಿ ಇಲಾಖೆಯಿಂದ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯುವ ವಾಣಿಜ್ಯ ಮೇಳದ ಅಂಗವಾಗಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಡಿ.14 ರಂದು ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ್ ಸ್ಪರ್ಧೆ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಜಂಟಿ ಕೃಷಿ ನಿರ್ದೇಶಕ ಡಾ.ರಾಜಶೇಖರ ವಿಲಿಯಮ್ಸ್ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ಆಧುನಿಕ ಜೀವನ ಶೈಲಿಯಿಂದಾಗಿ ಜನರ ಪಾರಂಪರಿಕ ಆಹಾರ ಪದ್ಧತಿ ಬದಲಾವಣೆ ಹೊಂದಿ ಹಲವಾರು ಕಾಯಿಲೆಗಳು ಜನರು ತುತ್ತಾಗುತ್ತಿದ್ದಾರೆ. ಈ ಎಲ್ಲ ಕಾಯಿಲೆಗಳಿಗೆ ಸಿರಿಧಾನ್ಯಗಳ ಸೇವನೆ ರಾಮಬಾಣವಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸಿರಿ ಧಾನ್ಯಗಳ ಬೇಸಾಯ ಹಾಗೂ ಸೇವನೆಗೆ ಒತ್ತು ನೀಡಿದ್ದು, ಪ್ರಸಕ್ತ 2023ನೇ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿದೆ ಎಂದು ಹೇಳಿದರು.




ಸಿರಿಧಾನ್ಯಗಳ ಬೇಸಾಯ ಮತ್ತು ಸೇವನೆಯಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, ಸಿರಿಧಾನ್ಯಗಳ ಬೇಸಾಯ ಮತ್ತು ಸೇವನೆಗೆ ಪ್ರೊತ್ಸಾಹಿಸಲು ಬರುವ ಜನವರಿ ಮೊದಲನೇ ವಾರದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯುವ ವಾಣಿಜ್ಯ ಮೇಳ-2024 ಹಮ್ಮಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸಾರ್ವಜನಿಕರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಸಿರಿಧಾನ್ಯಗಳಿಮದ ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸಬಹುದಾಗಿದ್ದು, ಈಗಾಗಲೇ ಆತ್ಮ ಯೋಜನೆಯಡಿ ಸುಮಾರು 500 ಮಹಿಳೆಯರಿಗೆ ತರಬೇತಿ ನೀಡಲಾಗಿದ್ದು, ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾದವರನ್ನು ರಾಜ್ಯಮಟ್ಟದ ಸ್ಪರ್ಧೆಗೆ ಕಳುಹಿಸಲಾಗುವುದು ಎಂದು ಅವರು ಹೇಳಿದರು.

ಜಿಲ್ಲಾ ಮಟ್ಟದ ಸಿರಿಧಾನ್ಯ ಪಾಕ್ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಮಹಿಳೆಯರು ಭಾಗವಹಿಸಿದ್ದರು.

ಸಿಹಿ ತಿಂಡಿ ವಿಭಾಗದಲ್ಲಿ ಮುದ್ದೇಬಿಹಾಳ ತಾಲೂಕಿನ ಬಸರಕೋಡ ಗ್ರಾಮದ ಶ್ರೀಮತಿ ಪುಷ್ಪಾ ಜಿಗಜಿನ್ನಿ ಮತ್ತು ಖಾರದ ತಿಂಡಿ ವಿಭಾಗದಲ್ಲಿ ಚಡಚಣ ತಾಲೂಕಿನ ಲೋಣಿ ಬಿ.ಕೆ. ಗ್ರಾಮದ ಶ್ರೀಮತಿ ಪದ್ಮಾ ಕಲ್ಯಾಣಶೆಟ್ಟಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾದರು. ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕಿ ಡಾ.ಕಾಶಿಬಾಯಿ ಖೇಡಗಿ ಮತ್ತು ಆತ್ಮ ಯೋಜನೆಯ ಉಪ ಯೋಜನಾ ನಿರ್ದೇಶಕ ಡಾ.ಎಂ.ಬಿ.ಪಟ್ಟಣಶೆಟ್ಟಿ ತೀರ್ಪುಗಾರರಾಗಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಉಪ ಕೃಷಿ ನಿರ್ದೇಶಕ ಪ್ರಕಾಶ ಚವ್ಹಾಣ, ಚಂದ್ರಕಾಂತ ಪವಾರ, ಬಾಲರಾಜ್, ಸಹಾಯಕ ಕೃಷಿ ನಿರ್ದೇಶಕರುಗಳಾದ ಶ್ರೀಮತಿ ಯಾಸ್ಮಿನ್ ಠಾಣೆದಾರ, ಶ್ರೀಮತಿ ವಿಜಯಲಕ್ಷ್ಮಿ ಚವ್ಹಾಣ ಮತ್ತು ಇತರ ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು.

## ಗ್ರಾಪಂ ಸದಸ್ಯ ಲಮಾಣಿ ಧರಣಿ ಸತ್ಯಾಗ್ರಹ ಅಂತ್ಯ

ಉದಯರಶ್ಮಿ ನ್ಯೂಸ್

ಮುದ್ದೇಬಿಹಾಳ: ಹುಲ್ಲೂರ ಗ್ರಾಪಂನಲ್ಲಿ ಬಸವ ವಸತಿ ಯೋಜನೆ ಫಲಾನುಭವಿಗಳ ಆಯ್ಕೆಯಲ್ಲಿ ನಿಯಮ ಉಲ್ಲಂಘಿಸಿದ್ದಾರೆ, ಆಯ್ಕೆ ತಡೆಹಿಡಿಯುವಂತೆ ಕೊರಿ ಸಲ್ಲಿಸಿದ್ದ ಅರ್ಜಿಗೆ ಹಿಂದಿನ ಪ್ರಭಾರ ಪಿಡಿಓ ಮನ್ನಣೆ ನೀಡದ್ದನ್ನು ಮತ್ತು ಅಧ್ಯಕ್ಷ, ಉಪಾಧ್ಯಕ್ಷರ ಮಕ್ಕಳ



ಸರ್ವಾಧಿಕಾರ ಧೋರಣೆ ಹಾಗೂ ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಅದೇ ಗ್ರಾಪಂ ಸದಸ್ಯ ಶಿವಾನಂದ ಲವಾಣಿ ಗುರುವಾರದಿಂದ ಆರಂಭಿಸಿದ್ದ ಧರಣಿ ಸತ್ಯಾಗ್ರಹ ಗ್ರಾಪಂ ಮಾಜಿ ಅಧ್ಯಕ್ಷ ಹಣಮಗೌಡ ಬಿರಾದಾರ, ಹಾಲಿ ಸದಸ್ಯರು ಹಾಗೂ ಸ್ಥಳೀಯ ಮುಖಂಡರ ಮನವೊಲಿಕೆಯಿಂದಾಗಿ ಶುಕ್ರವಾರ ಅಂತ್ಯಗೊಂಡಿತು.

ಈ ಕುರಿತು ಮಾಧ್ಯಮದವರೊಂದಿಗೆ ಸಚೀನ ಮಾತನಾಡಿ, ಶುಕ್ರವಾರ ಧರಣಿ ಸ್ಥಳಕ್ಕೆ ಆಗಮಿಸಿದ ಗ್ರಾಪಂ ಮಾಜಿ ಅಧ್ಯಕ್ಷ ಹಣಮಗೌಡ ಬಿರಾದಾರ, ಹಾಲಿ ಸದಸ್ಯರು ಹಾಗೂ ಸ್ಥಳೀಯ ಮುಖಂಡರ ಮುಂದೆ ಈ ಪಂಚಾಯಿತಿಯಲ್ಲಿ ತಪ್ಪುಗಳು ನಡೆಯದಂತೆ, ಎಲ್ಲ ಸದಸ್ಯರಿಗೂ ಸಮಾನ ಗೌರವ ಕೊಡುವಂತೆ ಆಡಳಿತದಲ್ಲಿರುವವರ ಮನವೊಲಿಸುವ ಮತ್ತು ಸದಸ್ಯರ ಮಾತು, ಅರ್ಜಿಗಳಿಗೆ ಮಹತ್ವ ಕೊಡುವಂತೆ ತಿಳಿಹೇಳುವ ಭರವಸೆ ನೀಡಿದ್ದರಿಂದ ಧರಣಿ ಮುಕ್ತಾಯಗೊಳಿಸಬೇಕಾಯಿತು. ಮುಂದೆ ಮತ್ತೆ ತಪ್ಪುಗಳು ನಡೆದಲ್ಲಿ ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗುತ್ತದೆ ಎಂದರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಹಣಮಗೌಡ ಬಿರಾದಾರ ಮಾತನಾಡಿ, ಶಿವಾನಂದ ಅವರು ಕೊಟ್ಟ ಅರ್ಜಿ ಮೇಲಧಿಕಾರಿಗಳಿಗೆ ಕಳಿಸುವಲ್ಲಿ ನಿರ್ಲಕ್ಷ್ಯ ತೋರಿದ ಸಿಬ್ಬಂದಿನ್ನು ತರಾಟೆಗೆ ತೆಗೆದುಕೊಂಡರು. ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಕೆಲಸ ಇಲ್ಲಿ ಆಗಬೇಕು. ಈಗ ಆಗಿರುವ ಅನ್ಯಾಯದ ಕುರಿತು ವಿಚಾರಣೆ ನಡೆಸಿ ಮುಂದೆ ಇಂಥ ತಪ್ಪು ಜರುಗದಂತೆ ಜಾಗ್ರತೆ ವಹಿಸಬೇಕು ಎಂದು ಎಚ್ಚರಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ಅಶೋಕಗೌಡ ಬಿರಾದಾರ, ಭೀಮಣ್ಣ ಮಾದರ, ದಿಲೀಪಕುಮಾರ ನಾಯಕ, ದಯಾನಂದ ಹಲಕಾವಟಗಿ, ಸಿರಿಯಪ್ಪ ದಾಸರ, ಸ್ಥಳೀಯ ಮುಖಂಡರಾದ ವಿನೋದ ಓಲೇಕಾರ, ಜಿ.ಎಚ್. ಚವ್ಹಾಣ, ಉಮೇಶ ಲಮಾಣಿ, ಭೀಮಸಿ ಮಾದರ, ಜಗದೀಶ ನಾಯ್ಕೋಡಿ, ರಾಮನಗೌಡ ಬಿರಾದಾರ, ಅಶೋಕ ಹೊಲ್ದೂರ, ಕಾಶೀನಾಥ ಬಿರಾದಾರ ಸೇರಿದಂತೆ ಮತ್ತಿತರರು ಇದ್ದರು.

## ಡಿ.16-17ರಂದು ಲೋಕ ಸೇವಾ ಆಯೋಗ ಪರೀಕ್ಷೆ :ನಿಷೇಧಾಜ್ಞೆ ಜಾರಿ

ಉದಯರಶ್ಮಿ ನ್ಯೂಸ್

ವಿಜಯಪುರ: ಕರ್ನಾಟಕ ಲೋಕಸೇವಾ ಆಯೋಗದಿಂದ ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ಕಿರಿಯ ಲೆಕ್ಕ ಸಹಾಯಕರ ಸಿ ಗುಂಪಿನ ಹುದ್ದೆಗಳ ನೇಮಕಾತಿಗಾಗಿ ಡಿ.16 ಹಾಗೂ 17 ರಂದು ನಗರದ ಪರೀಕ್ಷಾ ಕೇಂದ್ರಗಳಲ್ಲಿ ಕನ್ನಡ ಭಾಷಾ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ಜರುಗಲಿವೆ.

ಪಾರದರ್ಶಕ ಹಾಗೂ ಸುವ್ಯವಸ್ಥಿತವಾಗಿ ಪರೀಕ್ಷೆ ನಡೆಸಲು ಅನುಕೂಲವಾಗುವಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪರೀಕ್ಷಾ ಕೇಂದ್ರಗಳ 200 ಮೀ. ಪ್ರದೇಶವನ್ನು ಕಲಂ 144ರನ್ವಯ ನಿಷೇಧಿತ ಪ್ರದೇಶವೆಂದು ಘೋಷಿಸಿ, ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಯಾವುದೇ ಅಧಿಕಾರಿ ಹಾಗೂ ಸಿಬ್ಬಂದಿಗಳು ಮತ್ತು ಇತರರು ಮೊಬೈಲ್ ಫೋನ್ ತರುವುದು ಮತ್ತು ಬಳಸುವುದು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಕ್ಯಾಮರಾ ಇಲ್ಲದೇ ಇರುವ ಸಾಮಾನ್ಯ ಮೊಬೈಲ್ ಬೇಸಿಕ್ ಸೆಟ್ ಬಳಸಲು ಅನುಮತಿಸಿದೆ.

ಪರೀಕ್ಷಾ ದಿನಗಳಂದು ಬೆಳಿಗ್ಗೆ 9 ಗಂಟೆಯಿಂದ ಪರೀಕ್ಷೆ ಮುಕ್ತಾಯವಾಗುವವರೆಗೆ ಕೇಂದ್ರದ ವ್ಯಾಪ್ತಿಯಲ್ಲಿನ ಝರಾಕ್ಸ ಅಂಗಡಿಗಳು, ಕಂಪ್ಯೂಟರ್ ಸೆಂಟರ್‌ಗಳು, ಸೈಬರ್ ಕೆಫೆಗಳು,ಕೋಚಿಂಗ್ ಕೇಂದ್ರಗಳು ತೆರೆಯದಂತೆ ಆದೇಶಿಸಲಾಗಿದೆ.

## ಅಪಘಾತ ತಡೆಗೆ ಹಂಪ್ಸ ನಿರ್ಮಿಸಲು ಜಿಲ್ಲಾಧಿಕಾರಿಗೆ ಮನವಿ

ಉದಯರಶ್ಮಿ ನ್ಯೂಸ್

ಕೊಲ್ಹಾರ: ಪಟ್ಟಣಕ್ಕೆ ಸಮೀಪವಿರುವ ರಾಷ್ಟ್ರೀಯ ಹೆದ್ದಾರಿ 218ರಲ್ಲಿ ವಾಹನಗಳ ದಟ್ಟಣೆ ಸಂಚಾರದಿಂದ ಸರಣಿ ಅಪಘಾತಗಳಾಗುತ್ತಿದ್ದು ಕೆಲವು ಕಡೆ ಹಂಪ್ಸಗಳನ್ನು ನಿರ್ಮಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ತಾವುಗಳು ಸೂಚಣೆ ಕೊಡಬೇಕೆಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರಿಗೆ ಪಟ್ಟಣದ ಸಾರ್ವಜನಿಕರು ಮನವಿ ಸಲ್ಲಿಸಿದರು.

ಕಾರ್ಯನಿಮಿತ್ಯ ಜಿಲ್ಲಾಧಿಕಾರಿ ಟಿ. ಭೂಬಾಲನ್ ಕೊಲ್ಹಾರ ಪಟ್ಟಣಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಹಶೀಲ್ದಾರ ಕಚೇರಿಯಲ್ಲಿ ಅವರನ್ನು ಚಂದ್ರಶೇಖರಯ್ಯ ಹಿರೇಮಠ ನೇತೃತ್ವದಲ್ಲಿ ಭೇಟಿಯಾದ ಸ್ಥಳೀಯ ಮುಖಂಡರು ಬೀಳಗಿ ತಾಲೂಕಿನ ಗೋವಿನದಿನ್ನಿ ಟಕ್ಕಳಕಿ ವಸ್ತಿ ಪ್ರದೇಶದಿಂದ ಸೇತುವೆಯು ಸೇರಿದಂತೆ ಕೊಲ್ಹಾರ ತಾಲೂಕಿನ ಮುಳವಾಡ ಕ್ರಾಸ್ ತನಕ ಮತ್ತು ಕೊಲ್ಹಾರ ಪಟ್ಟಣಕ್ಕೆ ಪುರ ಪ್ರವೇಶ ಮಾಡುವ ಗಾಣಸಿರಿ ವೃತ್ತ ತಹಶೀಲ್ದಾರ ಕಾರ್ಯಾಲಯ ಸಮೀಪ ರಾಷ್ಟ್ರೀಯ ಹೆದ್ದಾರಿಯನ್ನು ದಾಟುವಾಗ ಅಪಘಾತಗಳು ಹೆಚ್ಚಿನಸಂಖ್ಯೆಯಲ್ಲಿ ಸಂಭವಿಸುತ್ತಿದ್ದು ಇದಕ್ಕೆ ಕಡಿವಾಣ ಹಾಕಲು ಹಂಪ್ಸಗಳ ನಿರ್ಮಾಣ ಮಾಡುವುದು ಅವಶ್ಯಕವಾಗಿದೆ ಎಂದು ಮನವಿ ಸಲ್ಲಿಸಿದರು.




ಈ ವ್ಯಾಪ್ತಿಯಲ್ಲಿ ನಾಮಫಲಕ, ಜಾಗೃತ ಫಲಕ, ಯುಕೆಪಿಯಿಂದ ಕೊಲ್ಹಾರ ಪಟ್ಟಣಕ್ಕೆ ಸಂಪರ್ಕ ಕಲ್ಪಿಸಲು ಪ್ರತ್ಯೇಕವಾದ ಒಳಮಾರ್ಗದ ಸರ್ವಿಸ್ ರಸ್ತೆ ನಿರ್ಮಿಸುವ ಮೂಲಕ ಅಪಘಾತಗಳು ಸಂಭವಿಸುವದನ್ನು ನಿಯಂತ್ರಿಸಬಹುದು ಹಾಗಾಗಿ ತಾವುಗಳು ಕೂಡಲೇ ಕ್ರಮ ಕೈಗೊಳ್ಳಲು ಮುಂದಾಗುತ್ತೀರಿ ಎಂದು ತಮ್ಮಲ್ಲಿ ಭರವಸೆಯನ್ನು ಇಟ್ಟುಕೊಂಡಿದ್ದು ತಕ್ಷಣವೇ ನ್ಯಾಯಸಮ್ಮತವಾದ ನಮ್ಮ ಬೇಡಿಕೆಯನ್ನು ಈಡೇರಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಕೊಲ್ಹಾರ ಪಟ್ಟಣದಲ್ಲಿ ತಾಲೂಕಾ ಆಡಳಿತದ ಎಲ್ಲ ಕಚೇರಿಗಳನ್ನು ಸಿಬ್ಬಂಧಿ ಸಹಿತವಾಗಿ ಪ್ರಾರಂಭಿಸಲು ತಾವುಗಳು ಏನು ಕ್ರಮ ಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಗೆ ಈಗಾಗಲೇ ಸರಕಾರಕ್ಕೆ ಪ್ರಸ್ತಾವಣೆಯನ್ನು ಸಲ್ಲಿಸಲಾಗಿದ್ದು ಸರಕಾರದಿಂದ ಬರುವ ಆದೇಶದಂತೆ ನಡೆದುಕೊಳ್ಳಲಾಗುವದು ಎಂದು ಜಿಲ್ಲಾಧಿಕಾರಿಗಳು ವರದಿಗಾರರಿಗೆ ತಿಳಿಸಿದರು.

ತಹಶೀಲ್ದಾರ ಎಸ್.ಎಸ್.ನಾಯಕಲಮಠ, ಪಪಂ ಸದಸ್ಯ ನಿಂಗಪ್ಪ ಗಣಿ, ಚಂದ್ರಶೇಖರ್ ಹಿರೇಮಠ, ರಾಮಣ್ಣ ಉಪ್ಪಲದಿನ್ನಿ, ವೀರಭದ್ರಪ್ಪ ಬಾಗಿ, ಬನಪ್ಪ ಬಾಲಗೊಂಡ, ಸಮಾಜ ಸೇವಕ ಈರಯ್ಯ ಗಣಕುಮಾರ ಸೇರಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

## ಮಠಗಳಿಂದ ನೆಮ್ಮದಿ ಸಾಧ್ಯ :ಗಂಗಾಧರ ಶಾಸ್ತ್ರಿ



ಉದಯರಶ್ಮಿ ನ್ಯೂಸ್

ಬ್ರಹ್ಮದೇವನಮಡು: ಪ್ರತಿಯೊಬ್ಬರೂ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಮಾನಸಿಕ ನೆಮ್ಮದಿ ಕಂಡಕೊಳ್ಳಬೇಕು ಎಂದು ಕೊಡೆಕಲ್ ಕುಮಾರ ಶ್ರೀ ಪ್ರಶಸ್ತಿ ಪುರಸ್ಕೃತ,ಪ್ರವಚನಕಾರ ಗಂಗಾಧರ ಶಾಸ್ತ್ರಿಗಳು ಹೇಳಿದರು.

ಸಿಂದಗಿ ತಾಲೂಕಿನ ಸುಕ್ಷೇತ್ರ ಹೊನ್ನಳ್ಳಿ ಗ್ರಾಮದ ಗುರು ವೀರಘಂಟೈ ಮಡಿವಾಳೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಗುರುವಾರ ರಾತ್ರಿ ಹಮ್ಮಿಕೊಂಡಿದ್ದ ವೈರಾಗ್ಯನಿಧಿ ಅಕ್ಕಮಹಾದೇವಿ ಮಹಾ ಪುರಾಣದಲ್ಲಿ ತೊಟ್ಟಿಲೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿವಿಧ ಜಾತಿ, ಧರ್ಮ, ಮತ, ಜನಾಂಗದ ಮಧ್ಯೆ ಭಾವೈಕ್ಯ ಹಾಗೂ ಸೌಹಾರ್ದತೆ ಮೂಡಿಸಲು ಪುರಾಣ, ಪ್ರವಚನಗಳು ಅತೀ ಅವಶ್ಯವಾಗಿವೆ ಎಂದರು.

ಶ್ರೀಮಠದ ಒಡೆಯರಾದ ಗುರುಲಿಂಗಯ್ಯ ಮಹಾಸ್ವಾಮೀಜಿ ಮಾತನಾಡಿ, ತಂದೆ ತಾಯಿ ಕಲಿಸುವ ಸಂಸ್ಕಾರ, ಗುರು ಕಲಿಸುವ ವಿದ್ಯೆ ಸಮಾಜ ಕಲಿಸುವ ಬದುಕುವ ಕಲೆ,ನಾವು ಯಾವ ರೀತಿಯಾಗಿ ಸ್ವೀಕರಿಸುತ್ತೇವೆ. ಎಂಬುದರ ಮೇಲೆ ನಮ್ಮ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಮಠ ಮಂದಿರಗಳಲ್ಲಿ ಇಂತಹ ಆಧ್ಯಾತ್ಮಿಕ ಚಿಂತನೆ ಮಹಾಪುರಷರ ಜೀವನ ಚರಿತ್ರೆ ಪ್ರವಚನದಿಂದ ಸಾಧ್ಯವಾಗುತ್ತೆ ಎಂದರು.

ಈ ವೇಳೆ ಅಯ್ಯಪ್ಪಮುತ್ತಾ ಗದ್ದಗಿಮಠ, ಆನಂದ ಗೌಡರ, ವೀರಭದ್ರ ಕಿರಣಗಿ, ಭೀಮನಗೌಡ ಹೆಬ್ಬಾಳ, ಮಾಂತೇಶ ಸಜ್ಜನ, ಶಾಂತಗೌಡ ಪಾಟೀಲ ಸೇರಿದಂತೆ ಮತ್ತಿತ್ತರಿದ್ದರು.

ಈ ಸಂದರ್ಭದಲ್ಲಿ ಪತ್ರಕರ್ತ ಮಲ್ಲು ಕೆಂಭಾವಿ ಅವರನ್ನು ಶ್ರೀಮಠದಿಂದ ಸನ್ಮಾನಿಸಿ ಗೌರವಿಸಲಾಯಿತು.

ಗದಗನ ವೀರೇಶ್ವರ ಪುಣ್ಯಾಶ್ರಮದ ವೀರೇಶಕುಮಾರ ಯಡ್ರಾಮಿ ಸಂಗೀತ ಸೇವೆಯೊಂದಿಗೆ ಗದಗನ ಹನುಮಂತಕುಮಾರ ಸುಂಕದ ತಬಲಾ ಸಾತ್ ನೀಡಿದರು.

## ಡಿ.18 ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಉದಯರಶ್ಮಿ ನ್ಯೂಸ್

ವಿಜಯಪುರ: ಕೆಪಿಟಿಸಿಎಲ್ ವತಿಯಿಂದ 110/11ಕೆವ್ಹಿ ಮಮದಾಪುರ, ಬೆಳ್ಳುಬ್ಬಿ ಹಾಗೂ 33 ಕೆವ್ಹಿ ದೇವರ ಗೆಣ್ಣೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 11 ಕೆವ್ಹಿ ಬೇಗಳ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ಸದರಿ ವಿದ್ಯುತ್ ವಿತರಣಾ ಕೇಂದ್ರಗಳಿಂದ ಹೊರಡುವ ಎಲ್ಲ 11 ಕೆವ್ಹಿ ವಿದ್ಯುತ್ ಮಾರ್ಗಗಳಿಗೆ ಡಿ.18 ರಂದು ಬೆಳಿಗ್ಗೆ 9 ರಿಂದ ಸಂಜೆ 6ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಹೆಸ್ಕಾಂದೊಂದಿಗೆ ಸಹಕರಿಸುವಂತೆ ವಿಜಯಪುರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಡಿ.16 ರಂದು ಜನಪರ ಉತ್ಸವ-ಸಾಂಸ್ಕೃತಿಕ ಕಾರ್ಯಕ್ರಮ

ಉದಯರಶ್ಮಿ ನ್ಯೂಸ್

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವಿಶೇಷ ಘಟಕ ಯೋಜನೆಯಡಿ ಡಿ.16 ರಂದು ವಿಜಯಪುರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದ ಆವರಣದಲ್ಲಿ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 5-00ಗಂಟೆಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಮೆರವಣಿಗೆ ನಡೆಯಲಿದೆ. ಸಂಜೆ 6-00ಕ್ಕೆ ಜರುಗುವ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವರಾದ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ. ವಿಜಯಪುರ ನಗರ ಶಾಸಕರಾದ ಬಸನಗೌಡ ಆರ್.ಪಾಟೀಲ (ಯತ್ನಾಳ) ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಕರ್ನಾಟಕ ಸರ್ಕಾರದ ನವದೆಹಲಿ ವಿಶೇಷ ಪ್ರತಿನಿಧಿ-2 ಪ್ರಕಾಶ ಹುಕ್ಕೇರಿ, ಸಂಸದ ರಮೇಶ ಜಿಗಜಿಣಗಿ, ಶಾಸಕರುಗಳಾದ ಯಶವಂತರಾಯಗೌಡ ಪಾಟೀಲ, ಹಣಮಂತ ನಿರಾಣಿ, ಪ್ರಕಾಶ ರಾಠೋಡ, ಸುನೀಲಗೌಡ ಬಿ.ಪಾಟೀಲ, ಪಿ.ಎಚ್.ಪೂಜಾರ, ಅಪ್ಪಾಜಿ ಸಿ.ಎಸ್.ನಾಡಗೌಡ, ವಿಠ್ಠಲ ಕಟಕದೊಂಡ, ಭೀಮನಗೌಡ(ರಾಜುಗೌಡ) ಬಸನಗೌಡ ಪಾಟೀಲ, ಅಶೋಕ ಮಲ್ಲಪ್ಪ ಮನಗೂಳಿ ಸೇರಿದಂತೆ ಜಿಲ್ಲೆಯ ವಿವಿಧ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಉಕ್ಕಲಿಯ ಯಮನಪ್ಪ ಭಜಂತ್ರಿ ಅವರಿಂದ ಶಹನಾಯಿ ವಾದನ, ದೇವರಹಿಪ್ಪರಗಿಯ ಕುಮಾರಿ ಶೃತಿ ಮೇಲಿನಮನೆ ಅವರಿಂದ ಸುಗಮ ಸಂಗೀತ, ವಿಜಯಪುರದ ಶ್ರೀಮತಿ ಪಲ್ಲವಿ ವೇದಂಡೆ ಮತ್ತು ಸಂಗಡಿಗರಿಂದ ಸಮೂಹ ನೃತ್ಯ, ದೇವರಹಿಪ್ಪರಗಿಯ ರಾವುತ್ ಎಸ್. ತಳಕೇರಿ ಅವರಿಂದ ಕ್ರಾಂತಿಗೀತೆಗಳು, ವಿಜಯಪುರ ಜಿಲ್ಲೆಯ ಎಸ್. ಕೆ.ವಿರೂಪಾಕ್ಷ ಅವರಿಂದ ಸುಡಗಾಡ ಸಿದ್ಧರ ಕೈ ಚಳಕ, ತಾಜಪೂರಿನ ಶ್ರೀಮಂತ ಮಾದರ ಅವರಿಂದ ಜಾನಪದ ಗೀತೆಗಳು, ವಿಜಯನಗರ ಜಿಲ್ಲೆಯ ಕೆ.ನಾರಾಯಣಪ್ಪ ಕಾರಿಗನೂರ ಅವರಿಂದ ತೊಗಲು ಗೊಂಬೆ ಹಾಗೂ ಲಚ್ಯಾಣದ ಘಂಟೆಪ್ಪ ಮಾದರ ಹಾಗೂ ಸಂಗಡಿಗರಿಂದ ರೇಣುಕಾ ಯಲ್ಲಮ್ಮ ಬಯಲಾಟ ಪ್ರದರ್ಶನಗೊಳ್ಳಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ್ ಅವರು ತಿಳಿಸಿದ್ದಾರೆ.

# ಡಿ.16 ರಂದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

**ಉದಯರಶ್ಮಿ ನ್ಯೂಸ್**

ವಿಜಯಪುರ: ಕೆಪಿಟಿಸಿಎಲ್ ವತಿಯಿಂದ 110/11ಕೆವ್ಹಿ ತೊರವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 11 ಕೆವ್ಹಿ ಬೇಗಳ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದರಿಂದ ಸದರಿ ವಿದ್ಯುತ್ ವಿತರಣಾ ಕೇಂದ್ರಗಳಿಂದ ಹೊರಡುವ ಎಲ್ಲ 11 ಕೆವ್ಹಿ ವಿದ್ಯುತ್ ಮಾರ್ಗಗಳಿಗೆ ಡಿ.16 ರಂದು ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಹೆಸ್ಕಾಂದೊಂದಿಗೆ ಸಹಕರಿಸುವಂತೆ ವಿಜಯಪುರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಹನುಮಾನ ಕಾರ್ತಿಕ ದೀಪೋತ್ಸವ ಮಂಗಲ ಇಂದು

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ತಾಲೂಕಿನ ರೋಣಿಹಾಳ ಸಮೀಪದ ಮುತ್ತಲದಿನ್ನಿ ಗ್ರಾಮದ ಆರಾಧ್ಯ ದೇವತೆ ಹನುಮಾನ ದೇವರ ಕಾರ್ತಿಕ ದೀಪೋತ್ಸವ ಮಂಗಲ ಕಾರ್ಯಕ್ರಮ ಡಿ.16 ಶನಿವಾರ ಸಾಯಂಕಾಲ ಜರುಗುವದು ಎಂದು ದೇವಸ್ಥಾನ ಸಮೀತಿಯವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ದಿನಾಂಕ 16 ಶನಿವಾರ ಸಾಯಂಕಾಲ 6 ಘಂಟೆಗೆ ಸಂಗೀತ ಕಾರ್ಯಕ್ರಮ 7 ಘಂಟೆಗೆ ಭಕ್ತಾಧಿಗಳಿಂದ ದೀಪೋತ್ಸವ ಬೆಳಗುವದು. ತದನಂತರ 7.30 ಘಂಟೆಗೆ ವಿಜಯಪೂರ ಜ್ಞಾನಯೋಗಾಶ್ರಮದ ಸಂಗಮೇಶ್ವರ ಮಹಾಸ್ವಾಮಿಗಳವರಿಂದ ಪ್ರವಚನ ಕಾರ್ಯಕ್ರಮ ಜರುಗುವದು. ಭಕ್ತಾಧಿಗಳು ದೇವರ ದರ್ಶನ ಆಶೀರ್ವಾದ ಮತ್ತು ಪ್ರವಚನವನ್ನು ಆಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಸಮೀತಿಯವರು ತಿಳಿಸಿದ್ದಾರೆ.

# ಬಸವನಬಾಗೇವಾಡಿ: ಅಧಿಕಾರಿಗಳಿಂದ ಲಾರ್ವಾ ಸಮೀಕ್ಷೆ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಪಟ್ಟಣದಲ್ಲಿ ಜ್ವರ ಪ್ರಕರಣಗಳು ಕಂಡುಬಂದಿರುವುದರಿಂದ ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳ ಲಾರ್ವ ತಂಡವು ಶುಕ್ರವಾರ ಪಟ್ಟಣದ ವಿವಿಧ ಗಲ್ಲಿಗಳಲ್ಲಿ ಲಾರ್ವಾ ಸಮೀಕ್ಷೆ ಮಾಡುವ ಜೊತೆಗೆ ಸಂಶಯಾಸ್ಪದ ರೋಗಿಗಳ ರಕ್ತಸಂಗ್ರಹ ಮಾಡಿ ಜಿಲ್ಲಾ ಕೇಂದ್ರಕ್ಕೆ ಕಳುಹಿಸಿಕೊಡಲಾಯಿತು. ಜನರಿಗೆ ಮುಂಜಾಗ್ರತೆ ಕುರಿತು ಜಾಗೃತಿ ಮೂಡಿಸಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ. ಎಸ್.ಎಸ್.ಓತಗೇರಿ ಅವರು, ಇಂದು ಪಟ್ಟಣದಲ್ಲಿ ನಮ್ಮ ಇಲಾಖೆಯು ನಡೆಸುವ ನಿಯಮಿತ ಲಾರ್ವ ಸಮೀಕ್ಷೆ ಮಾಡುವ ಜೊತೆಗೆ ಸಂಶಯ ಬಂದ ರೋಗಿಗಳಿಂದ ರಕ್ತ ಸಂಗ್ರಹ ಮಾಡಿ ರಕ್ತವನ್ನು ಪ್ರಯೋಗಾಲಯಕ್ಕೆ ಪರೀಕ್ಷೆ ಕಳುಹಿಸಿಕೊಡಲಾಗಿದೆ. 10 ಜನರ ರಕ್ತವನ್ನು ವಿಜಯಪುರದ ಡಿಪಿಎಚ್ ಲ್ಯಾಬ್‌ಗೆ ಕಳುಹಿಸಲಾಯಿತು. 12 ಜನರಿಗೆ ಬ್ಲಡ್ ಸ್ಮಿಮರ ಮಾಡಲಾಗಿದೆ. ಮನೆ ಮನೆಗೆ ತೆರಳಿ ಜ್ವರ ಸಮೀಕ್ಷೆ ಮಾಡಲಾಯಿತು. ಜ್ವರ ಬಂದರೆ ನಮ್ಮ ಕ್ಲಿನಿಕ್ ಇಲ್ಲವೇ ಸರ್ಕಾರಿ ಆಸ್ಪತ್ರೆಗೆ ತೆರಳಿ ರಕ್ತ ತಪಾಸಣೆ ಮಾಡಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕೆಂದು ಜನರಿಗೆ ತಿಳಿಸಲಾಯಿತು ಎಂದು ಮಾಹಿತಿ ನೀಡಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಯುವ ಘಟಕದ ಅಧ್ಯಕ್ಷ ಅಶೋಕ ಹಾರಿವಾಳ ಅವರು, ಈಚೆಗೆ ಪಟ್ಟಣದಲ್ಲಿ ಹಂದಿಗಳಿಗೆ ರೋಗ ಬಂದು ಸಾಯುತ್ತಿವೆ. ಇದರಿಂದಾಗಿ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಮಕ್ಕಳು ಸೇರಿದಂತೆ ಅನೇಕರಿಗೆ ಜ್ವರ ಸೇರಿದಂತೆ ವಿವಿಧ ರೋಗದಿಂದ ಬಳಲುತ್ತಿದ್ದಾರೆ. ಡೆಂಗ್ಯೂ ಪ್ರಕರಣಗಳು ಸಹ ಕಂಡುಬಂದಿವೆ. ಇದರ ಬಗ್ಗೆ ತಹಸೀಲ್ದಾರರಿಗೆ, ತಾಲೂಕು ಆರೋಗ್ಯಾಧಿಕಾರಿಗಳಿಗೆ ಈ ಕುರಿತು ಗಮನಕ್ಕೆ ತರಲಾಗಿತ್ತು. ಅದಕ್ಕಾಗಿ ಇಂದು ಅಧಿಕಾರಿಗಳ ತಂಡವು ಲಾರ್ವಾ ಸಮೀಕ್ಷೆ ಮಾಡುವ ಜೊತೆಗೆ ರಕ್ತವನ್ನು ಪರೀಕ್ಷೆ ಕಳುಹಿಸಲಾಗುತ್ತಿರುವುದು ಒಳ್ಳೆಯದು. ಕೂಡಲೇ ಅಧಿಕಾರಿಗಳು ಜನರ ಆರೋಗ್ಯದ ರಕ್ಷಣೆಗೆ ಕಡೆಗೆ ಗಮನ ಹರಿಸಬೇಕೆಂದರು.

ಸಮೀಕ್ಷಾ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಜಿಲ್ಲಾ ಮಟ್ಟದ ಅ◻ಕಾರಿಗಳಾದ ಡಾ.ಸುರೇಶ ಪಾಚಾಪುರ, ಅನಿಲ ಹಿರೇಮಠ, ಮಲೇರಿಯಾ ಟೆಕ್ನಿಕಲ್ ಸೂಪರವೈಜರ ಸಂಜೀವ ಸಜ್ಜನ, ತಾಲೂಕು ಆರೋಗ್ಯಾ◻ಕಾರಿ ಡಾ.ಎಸ್.ಎಸ್.ಓತಗೇರಿ, ರಾಜಶೇಖರ ಚಿಂಚೋಳಿ, ಎಸ್.ಬಿ.ಪಾಟೀಲ, ವ್ಹಿ.ಆರ್.ಪವಾರ, ಮಲ್ಲು ಬಾಗೇವಾಡಿ, ಚನ್ನು ಅಸ್ಕಿ, ಸುಜಾತ ಕೆಸೇರಿ, ತಾಲೂಕು ಲಾರ್ವಾ ಸಮೀಕ್ಷಾ ತಂಡ, ಆಶಾ ಕಾರ್ಯಕರ್ತರು ಇದ್ದರು.

# ಶಾಲಾ-ಕಾಲೇಜುಗಳ ಬಳಿ ತಂಬಾಕು ಮಾರಿದರೆ ಕಾನೂನು ಕ್ರಮ

**ಉದಯರಶ್ಮಿ ನ್ಯೂಸ್**



ಕೊಲ್ಹಾರ: ವಿದ್ಯಾರ್ಥಿಗಳು ತಂಬಾಕು ಉತ್ಪನ್ನಗಳ ಮೇಲೆ ಆಕರ್ಷಿತರಾಗಬಾರದೆನ್ನುವ ಕಾರಣಕ್ಕಾಗಿ ಶಾಲಾ-ಕಾಲೇಜುಗಳ 100ಮೀ ವ್ಯಾಪ್ತಿಯಲ್ಲಿ ಯಾವುದೇ ಅಂಗಡಿಗಳಲ್ಲಿ ತಂಬಾಕು ಹಾಗೂ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಬಾರದು ಒಂದು ವೇಳೆ ಮಾರಾಟ ಮಾಡಿದ್ದೆಯಾದಲ್ಲಿ ಅಂಗಡಿಗಳ ಮೇಲೆ ಸೂಕ್ತ ಕಾನೂನು ರೀತಿ ಕ್ರಮಕೈಗೊಳ್ಳಲಾಗುವುದು ಎಂದು ತಹಶೀಲ್ದಾರ ಎಸ್.ಎಸ್. ನಾಯಕಲಮಠ ಹೇಳಿದರು.

ಪಟ್ಟಣದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ತಾಲೂಕಿನಾದ್ಯಂತ ಹಮ್ಮಿಕೊಂಡ ಗುಲಾಬಿ ಆಂದೋಲನ ಜನಜಾಗೃತಿ ಕಾರ್ಯಕ್ರಮಕ್ಕೆ ಸರ್ಕಾರಿ ಪ್ರೌಢ ಶಾಲಾ ವ್ಯಾಪ್ತಿಯ ಗೂಡಂಗಡಿಗಳ ಮಾಲಿಕರಿಗೆ ವಿದ್ಯಾರ್ಥಿಗಳಿಂದ ಗುಲಾಬಿ ಹೂವು ಕೊಡಿಸಿ ಮಾತನಾಡಿದರು.

ತಂಬಾಕು ಹಾಗೂ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದು ಹಾಗೂ ಅವುಗಳನ್ನು ಸೇವಿಸುವುದು ಬಹಳಷ್ಟು ಅಪಾಯಕಾರಿಯಾಗಿದೆ. ಸರ್ಕಾರದ ಆದೇಶದ ಅನುಸಾರ ವಿದ್ಯಾರ್ಥಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಇಂದು ಪಟ್ಟಣದ ಶಾಲಾ ಕಾಲೇಜುಗಳ ಸುತ್ತಮುತ್ತ ನೂರು ಮೀಟರ್ ಅಂತರದಲ್ಲಿ ವ್ಯಾಪಾರ ಮಾಡುವಂತಹ ವ್ಯಾಪಾರಸ್ಥರಿಗೆ ತಂಬಾಕು ಹಾಗೂ ತಂಬಾಕು ಉತ್ಪನ್ನಗಳನ್ನು ಮರಾಟ ಮಾಡಬಾರದು ಎಂದು ಗುಲಾಬಿ ಹೂವನ್ನು ಕೊಡುವುದರ ಮೂಲಕ ಒಂದು ವಾರದ ಗಡುವನ್ನು ನೀಡಲಾಗಿದೆ. ಮನವರಿಕೆ ಮಾಡಿದ ನಂತರವೂ ಕೂಡಾ ತಂಬಾಕು ಮಾರಾಟವನ್ನು ಮಾಡಿದರೆ ಅಂತವರ ಮೇಲೆ ಕಾನೂನಿನ ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಲಕ್ಷ್ಮೀ ತೆಲ್ಲೂರ ಮಾತನಾಡಿ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ವಿಜಯಪುರ ಜಿಲ್ಲೆಯನ್ನು ತಂಬಾಕು ಮುಕ್ತ ಜಿಲ್ಲೆಯನ್ನಾಗಿ ಮಾಡುವ ಸಲುವಾಗಿ ಗುಲಾಬಿ ಆಂದೋಲನ ಎಂಬ ವಿನೂತನ ಕಾರ್ಯಕ್ರಮವನ್ನು ಕೊಲ್ಹಾರ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಹಮ್ಮಿಕೊಳ್ಳಲಾಗಿದೆ. ತಂಬಾಕು ಸೇವನೆಯಿಂದ ಕ್ಯಾನ್ಸರ, ಶ್ವಾಸಕೋಶದ ಕಾಯಿಲೆಗಳು ಬರುತ್ತವೆ. ಮಕ್ಕಳು ಭವಿಷ್ಯದ ಪ್ರಜೆಗಳು. ಅವರ ಆರೋಗ್ಯ ಕಾಪಾಡಲು ತಂಬಾಕು ಸೇವನೆಯನ್ನು ತಡೆದರೆ ಅವರು ಆರೋಗ್ಯಯುತವಾಗಿರುತ್ತಾರೆ. ವಿದ್ಯಾರ್ಥಿಗಳು ಜಾಗೃತರಾದರೆ ಗ್ರಾಮ, ಪಟ್ಟಣಗಳಲ್ಲಿ ಹಾಗೂ ಮನೆಯಲ್ಲಿ ಜಾಗೃತಿಯನ್ನು ಮೂಡಿಸುತ್ತಾರೆ. ನಂತರ ಪಟ್ಟಣದಲ್ಲಿ ತಂಬಾಕು ಮಾರಾಟ ಮಾಡುವ ಅಂಗಡಿ ವ್ಯಾಪಾರಸ್ಥರಿಗೆ ಕೂಡಾ ಮನವರಿಕೆ ಮಾಡಿಕೊಟ್ಟು ಮಾರಾಟ ಮಾಡದಿರಲು ತಿಳಿಸಲಾಗುವುದು ಎಂದರು.

ಪಟ್ಟಣದ ಸರ್ಕಾರಿ ಪ್ರೌಢ ಶಾಲೆ, ಸಿಕ್ಯಾಬ್ ಪ್ರೌಢ ಶಾಲೆ, ಎಮ್‌ಪಿಎಸ್ ಶಾಲೆ ಸೇರಿದಂತೆ ಎಲ್ಲ ಶಾಲಾ ಕಾಲೇಜಿನ ಸುತ್ತಮುತ್ತಲಿರುವ ಅಂಗಡಿ ವ್ಯಾಪಾರಸ್ಥರಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿರುವ ಅಂಗಡಿ ವ್ಯಾಪಾರಸ್ಥರಿಗೆ ಗುಲಾಬಿ ಹೂವನ್ನು ನೀಡಿ ತಂಬಾಕು ಹಾಗೂ ತಂಬಾಕು ಉತ್ಪನ್ನಗಳನ್ನು ಅಪ್ರಾಪ್ತರಿಗೆ ಮಾರಾಟ ಮಾಡದಂತೆ ತಹಶೀಲ್ದಾರ ಎಸ್.ಎಸ್. ನಾಯಕಲಮಠ ಹಾಗೂ ವೈದ್ಯಾಧಿಕಾರಿ ಲಕ್ಷ್ಮೀ ತೆಲ್ಲೂರ ವಿನಂತಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಎಎಸ್‌ಐ ಎಸ್.ಎಸ್. ಬಡಿಗೇರ, ಶಿಕ್ಷಣ ಸಂಯೋಜಕ ಜಿ.ಎಸ್. ಗಣಿಯವರ, ಸಿಆರ್‌ಪಿ ಜಿ.ಆಯ್. ಗೊಡ್ಯಾಳ, ಆರೋಗ್ಯ ನೀರೀಕ್ಷಣಾಧಿಕಾರಿಗಳಾದ ಅಶೋಕ ಕೊಲ್ಹಾರ, ಎಲ್.ಎಲ್. ಕಟಗಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಶಾಲಾ ಶಿಕ್ಷಕರು, ಮಕ್ಕಳು ಹಾಗೂ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಕೂಲಿಕಾರರಿಗೆ ಕೆಲಸ ನೀಡದಿದ್ದರೆ ಕ್ರಮ :ತಾಪಂ ಇಒ ಮುದ್ದಿನ್

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಬರ ಪರಿಸ್ಥಿತಿ ಇರುವುದರಿಂದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸುವುದರ ಜೊತೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಐಇಸಿ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರತಿ ಮನೆಗಳಿಗೆ ತೆರಳಿ ಕೂಲಿ ಬೇಡಿಕೆ ಸಂಗ್ರಹಿಸುವುದು, ಹಾಗೂ ಸ್ವ ಸಹಾಯ ಸಂಘಗಳ ಸದಸ್ಯರಿಗೆ ಸಭೆಗಳನ್ನು ಆಯೋಜಿಸಿ ನರೇಗಾ ಬಗ್ಗೆ ಜಾಗೃತಿ ಮೂಡಿಸುವುದು ಪ್ರಮುಖವಾಗಿರುತ್ತದೆ. ಒಂದು ವೇಳೆ ಅಧಿಕಾರಿಗಳು ಕೆಲಸ ಬಯಸಿ ಬರುವ ಕೂಲಿಕಾರರಿಗೆ ಕೆಲಸ ನೀಡದಿದ್ದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಮುದ್ದಿನ್ ತಿಳಿಸಿದರು.

ಪಟ್ಟಣದ ತಾಲೂಕ ಪಂಚಾಯಿತಿ ಕಾರ್ಯಾಲಯದಲ್ಲಿ ಗುರುವಾರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಪ್ರಗತಿ ಪರಿಶೀಲನಾ ಸಭೆ ತಗೆದುಕೊಂಡು ಬರ ಪರಿಸ್ಥಿತಿ ಇರುವುದರಿಂದ ಕೂಲಿ ಬಯಸಿ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಕೆಲಸ ನೀಡಬೇಕು, ಒಂದು ವೇಳೆ ಅರ್ಜಿ ಸಲ್ಲಿಸಿದ 15 ದಿನಗಳೊಳಗಾಗಿ ಕೆಲಸ ನೀಡದಿದ್ದಲ್ಲಿ ಅಂತಹ ಫಲಾನುಭವಿಗಳಿಗೆ ಕಡ್ಡಾಯವಾಗಿ ನಿರುದ್ಯೋಗ ಭತ್ಯೆ ಕೊಡಿಸಲು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈಗಾಗಲೇ ಸೂಚನೆ ನೀಡಿದ್ದಾರೆ.

ಅದಕ್ಕಾಗಿ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಎಲ್ಲಾ ರೀತಿ ಸಭೆಯನ್ನು ಆಯೋಜನೆ ಮಾಡಿ ಬರ ನಿರ್ವಹಣೆಗೆ ಸನ್ನದ್ಧರಾಗಬೇಕು ಎಂದು ಹೇಳಿದರು. ಪ್ರಗತಿ ಕುಂಠಿತ ಇರುವ ಗ್ರಾಮ ಪಂಚಾಯಿತಿಗಳಿಗೆ ಖುದ್ದಾಗಿ ಭೇಟಿ ಮಾಡಿ ಪರಿಶೀಲಿಸುವುದು. ನರೇಗಾ ಯೋಜನೆ ಅಡಿ ಪೂರ್ಣಗೊಂಡ ಕಾಮಗಾರಿಗಳ ಕುರಿತು ದಾಖಲೆಗಳನ್ನು ಸರ್ಕಾರದ ಆದೇಶದಂತೆ 21 ಚೆಕ್ ಲಿಸ್ಟ ಪ್ರಕಾರ ಅನುಕ್ರವಾಗಿ ದಾಖಲಿಕರಣ ಮಾಡಬೇಕು ಎಂದರು.

ರಾಜ್ಯ ಸರಕಾರ ಆದೇಶದಂತೆ ಕೂಸಿನ ಮನೆ (ಶಿಶು ಪಾಲನ) ಕೇಂದ್ರಗಳು ಆರಂಭಿಸಲು ತಿಳಿಸಿರುವುದರಿಂದ ನಮ್ಮ ತಾಲೂಕಿನಲ್ಲಿ ಒಟ್ಟು 7 ಶಿಶು ಪಾಲನ ಕೇಂದ್ರಗಳ ಗುರಿ ಹೊಂದಿದ್ದು ಇವುಗಳ ಸ್ಥಳ ಕಟ್ಟಡ ಪರಿಶೀಲನೆಯಾಗಿದ್ದು, ಕೇಂದ್ರದ ದುರಸ್ತಿಗಳನ್ನು ಹಾಗೂ ಬಣ್ಣಗಳನ್ನು ಹಚ್ಚಿ ಮಕ್ಕಳ ಸ್ನೇಹಿ ವಾತವರಣ ನಿರ್ಮಿಸಿ ಮಕ್ಕಳಿಗೆ ಎಲ್ಲಾ ರೀತಿ ಮೂಲ ಸೌಕರ್ಯಗಳನ್ನು ಒದಗಿಸಿ ಅತೀ ತುರ್ತಾಗಿ ಪ್ರಾರಂಭಿಸಲು ತಿಳಿಸಿದರು. 2024-25ನೇ ಸಾಲಿನ ನರೇಗಾ ಯೋಜನೆಗೆ ಸಂಬಂಧಿಸಿದ ಎಲ್ಲಾ ಗ್ರಾಮ ಪಂಚಾಯಿತಿಗಳ ಕ್ರೀಯಾ ಯೋಜನೆಯನ್ನು ಸಿದ್ದಪಡಿಸಿ, ನಿಗದಿಪಡಿಸಿದ ನಮೂನೆಯಲ್ಲಿ ಡಿಸೆಂಬರ್‌ರೊಳಗೆ ತಾಲೂಕ ಪಂಚಾಯಿತಿಗೆ ಸಲ್ಲಿಸಲು ಸೂಚಿಸಿದರು.

ಮುಂದುವರೆದು, ಗ್ರಾಮ ಪಂಚಾಯತಿ ಸಿಬ್ಬಂದಿಗಳ ಅನುಮೋದನೆ. ಗ್ರಾಮ ಪಂಚಾಯಿತಿ ಗ್ರಂಥಾಲಯ ಸಿಬ್ಬಂದಿಗಳ ಸಂಭಾವನೆ, ಆಸ್ತಿಗಳ ಸಮೀಕ್ಷೆ, ತೆರಿಗೆ ವಸೂಲಾತಿ, ಸಕಾಲ, ಇ-ಹಾಜರಾತಿ, ವಸತಿ ಯೋಜನೆ ಹೆಚ್ಚುವರಿ ಮನೆಗಳ ಪ್ರಗತಿ ಹಾಗೂ ವಿವಿಧ ಯೋಜನೆಗಳ ಕುರಿತು ಸಭೆ ತಗೆದುಕೊಂಡಿದ್ದರು. ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರು (ಪಂ. ರಾ ) ತಾ.ಪಂ. ಕೊಲ್ಹಾರ ರವರು, ತಾ.ಪಂ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಗ್ರಾ.ಪಂ. ಸಿಬ್ಬಂದಿಗಳು ಹಾಜರಿದ್ದರು.

## ಚಿಮ್ಮಡದ ಕಾರ್ತಿಕ ದೀಪೋತ್ಸವದಲ್ಲಿ ಪ್ರಭು ಶ್ರೀ ಅಭಿಮತ

# ವೈಜ್ಞಾನಿಕ ಹಿನ್ನೆಲೆಗಳ ಧಾರ್ಮಿಕ ಉತ್ಸವಗಳು

**ಉದಯರಶ್ಮಿ ನ್ಯೂಸ್**



ಚಿಮ್ಮಡ: ಪ್ರತಿಯೊಂದು ಧರ್ಮದ ಪೂರ್ವಜರು ಆಚರಣೆಗೆ ತಂದಿರುವ ಹಬ್ಬ, ಹರಿದಿನ, ಧಾರ್ಮಿಕ, ಸಾಮಾಜಿಕ ಉತ್ಸವಗಳಿಗೆ ವೈಜ್ಞಾನಿಕ ಹಿನ್ನೆಲೆಗಳಿವೆ ಎಂದು ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಗ್ರಾಮದಲ್ಲಿ ಗುರುವಾರ ರಾತ್ರಿ ಶ್ರೀ ಪ್ರಭುಲಿಂಗೇಶ್ವರ ಕಾರ್ತಿಕೋತ್ಸವದ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ದೀಪೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಅವರು ಕಾರ್ತಿಕ ಮಾಸದ ಮಾಗಿಯ ಛಳಿಯಿಂದ ಪ್ರಕೃತಿದತ್ತ ಬರುವ ರೋಗಾಣುಗಳನ್ನು ನಾಶಗೊಳಿಸಲು ಆಚರಣೆಗೆ ತಂದಿರುವ ಈ ದೀಪೋತ್ಸವದಿಂದ ಮನುಷ್ಯರ ಜೀವನ ಬೆಳಗಲಿದೆಯಂದರು. ಸ್ಥಳಿಯ ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಮಾತನಾಡಿ ಗ್ರಾಮದಲ್ಲಿ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಅನ್ನಪ್ರಸಾದ ವಿತರಿಸುವ ಪದ್ಧತಿ ದೈವ ನೀಡಿದ ಮಹತ್ವದ ಕೊಡುಗೆಯಾಗಿದ್ದು ಅನ್ನ ಸಂತರ್ಪಣೆ ನಡೆಯುವ ಮನೆಗಳು ಸಕಲ ಸೌಭಾಗ್ಯಗಳಿಂದ ಕೂಡಿದ್ದು ಹದಿನಾಲ್ಕು ಬ್ರಹ್ಮಗಳಲ್ಲಿ ಅನ್ನ ಪೂರ್ಣಬ್ರಹ್ಮವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಪುಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಅಣ್ಣಪ್ಪಗೌಡ ಪಾಟೀಲ, ರಾಮಪ್ಪಾ ಬಗನಾಳ, ಗ್ರಾಪಂ. ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಗುರಲಿಂಗಪ್ಪಾ ಪೂಜಾರಿ, ಆನಂದ ಕವಟಿ, ಪರಪ್ಪಾ ಪಾಲಭಾವಿ, ಅಶೋಕ ಧಡೂತಿ, ಬೀರಪ್ಪಾ ಹಳೆಮನಿ, ಪ್ರಭು ಮುಧೋಳ, ಬಸವರಾಜ ಕುಂಚನೂರ ಸೇರಿದಂತೆ ಹಲವಾರು ಜನ ಪ್ರಮುಖರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಗ್ರಾಮದ ಭಾಹುಸಾಹೇಬರ ಮಠದ ಆವರಣದಿಂದ ಬನಸಂಕರಿ ದೇವಸ್ಥಾನ, ಮಲ್ಲಿಕಾರ್ಜುನ ದೇವಸ್ಥಾನ, ದ್ಯಾಮವ್ವದೇವಿ ದೇವಸ್ಥಾನ, ಶ್ರೀ ವಿರಕ್ತಮಠ, ಶ್ರೀ ಪ್ರಭುಲಿಂಗೇಶ್ವರ ದೇವಸ್ಥಾನದ ಆವರಣ ಸೇರಿದಂತೆ ಗ್ರಾಮದ ಪ್ರಮುಖ ಬೀದಿಗಳನ್ನು ಟ್ಯಾಂಕರ ಮೂಲಕ ನೀರಿನಿಂದ ಶುಚಿಗೊಳಿಸಿ ರಂಗೋಲಿ ಹಾಕಿ ಸಾವಿರಾರು ದೀಪಗಳನ್ನು ಬೆಳಗಿಸುವ ಮೂಲಕ ಕಾರ್ತಿಕ ದೀಪೋತ್ಸವವನ್ನು ಅದ್ಧೂರಿಯಾಗಿ ಆವರಿಸಲಾಯಿತು. ಗ್ರಾ.ಪಂ. ಮಾಜಿ ಅಧ್ಯಕ್ಷ ಪರಪ್ಪಾ ಪಾಲಭಾವಿ ಕಾರ್ಯಕ್ರಮದಲ್ಲಿ ದಾಸೋಹ ಸೇವೆ ನೆರವೇರಿಸಿದರು.

ಶಿಕ್ಷಕ ಎಸ್.ಟಿ.ಕುಂಬಾರ ಸ್ವಾಗತಿಸಿದರು. ಪ್ರಕಾಶ ಪೂಜಾರಿ ನಿರೂಪಿಸಿ ವಂದಿಸಿದರು.

# ಧಾರ್ಮಿಕ ಕಾರ್ಯಕ್ರಮಗಳು ಯುವಕರಿಗೆ ದಾರಿದೀಪ



**ಉದಯರಶ್ಮಿ ನ್ಯೂಸ್**

ಮೋರಟಗಿ: ಇಡೀ ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾದ ಸಂಸ್ಕೃತಿ ಹೊಂದಿದಂತ ನಾಡು ನಮ್ಮದು. ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಯುವ ಪೀಳಿಗೆಗೆ ದಾರಿದೀಪವಾಗುತ್ತವೆ ಎಂದು ಮಾಜಿ ಶಾಸಕ ರಮೇಶ ಭೂಸನೂರ ಹೇಳಿದರು.

ಗ್ರಾಮದ ಆರಾಧ್ಯದೇವ ಶ್ರೀವೀರಭದ್ರೇಶ್ವರ ಜಾತ್ರೆಯ ಪ್ರಯುಕ್ತ ಗುರುವಾರ ರಾತ್ರಿ ಹಮ್ಮಿಕೊಂಡ ಧರ್ಮ ಸಭೆಯಲ್ಲಿ ಜ್ಯೋತಿ ಬೆಳಗಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಕೆ ಹೆಚ್ಚಾಗುತ್ತಿದ್ದಂತೆ ಜಾತ್ರೆಗಳು ಸಂಸ್ಕೃತಿಕ ಕಾರ್ಯಕ್ರಮಗಳು ಸಂಸಾರಿಕ ನಾಟಕ, ಬಯಲಾಟ ಗಳು ಮಾಯವಾಗುತ್ತಿವೆ. ನಮ್ಮ ಹಿರಿಯರ ಕಾಲದಲ್ಲಿ ಒಡೆದು ಹೋದಂತ ಸಂಸಾರಗಳು ಒಳ್ಳೆಯ ನಾಟಕಗಳು ನೋಡಿ ಅದರಲ್ಲಿ ಬರುವಂತಹ ದೃಶ್ಯಗಳನ್ನು ವೀಕ್ಷಿಸಿ ತಮ್ಮಷ್ಟಕ್ಕೆ ತಾವೇ ಒಗ್ಗೂಡಿದ್ದಾರೆ. ಆ ನಿಟ್ಟಿನಲ್ಲಿ ಇಂದಿನ ಯುವಕರು ಅನವಶ್ಯಕವಾಗಿ ಮೊಬೈಲ್ ಉಪಯೋಗಿಸದೆ, ಸತ್ಯ ಶರಣರ ಸಂತರ, ದಾಸರ ಪುರಾಣ ಪ್ರವಚನಗಳನ್ನು ಆಲಿಸಿ ಉತ್ತಮ ನಾಗರೀಕರಾಗಿ ಹೊರಹೊಮ್ಮಬೇಕು ಎಂದು ಹೇಳಿದ ಅವರು, ಈ ಗ್ರಾಮದಲ್ಲಿ ವರ್ಷದೊಳಗೆ ತಿಂಗಳಿಗೊಂದು ಜಾತ್ರೆಗಳು ಹಮ್ಮಿಕೊಂಡು ಜಾತ್ಯತೀತವಾಗಿ ಧಾರ್ಮಿಕ ಸಮಾರಂಭಗಳು ಹಮ್ಮಿಕೊಳ್ಳುತ್ತಿರುವ ಗ್ರಾಮಸ್ಥರ ಕಾರ್ಯ ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಕನ್ನಯ್ಯ ಮುತ್ಯಾ ಸಾನಿಧ್ಯ ವಹಿಸಿದ್ದರು, ಮಾಜಿ ಗ್ರಾ. ಪಂ. ಅಧ್ಯಕ್ಷ ಬಿ. ಟಿ. ಜೋನಾಳ, ಮಾಜಿ ತಾ. ಪಂ. ಸದಸ್ಯ ಜಿ. ಕೆ. ನೆಲ್ಲಗಿ, ಸಂತೋಷ ಶಾಬಾದಿ, ರೇವಣಸಿದ್ದ ಮಸಳಿ, ಡಾ. ರವೀಂದ್ರ ಕುಲಕರ್ಣಿ, ಡಾ. ರಾಜಶೇಖರ ಪತ್ತಾರ, ನಾಗೇಶ ಶ್ಯಾಬಾದಿ ಸೇರಿದಂತೆ ಹಲವರಿದ್ದರು.

# ಇಂದು ಬಲಭೀಮೇಶ್ವರ ಕಾರ್ತಿಕೋತ್ಸವ

**ಉದಯರಶ್ಮಿ ನ್ಯೂಸ್**



ಬ್ರಹ್ಮದೇವನಮಡು: ಸಿಂದಗಿ ತಾಲೂಕಿನ ಸುಕ್ಷೇತ್ರ ಬ್ರಹ್ಮದೇವನಮಡು ಗ್ರಾಮದ ಆರಾಧ್ಯ ದೈವ ಶ್ರೀ ಬಲಭೀಮೇಶ್ವರ (ಚಟ್ಟಿ) ಕಾರ್ತಿಕೋತ್ಸವ ಡಿ.16 ರಂದು ನಡೆಯಲಿದೆ. ದೇವಸ್ಥಾನದ ಅರ್ಚಕ ನಿಂಗಣ್ಣಚಾರ್ಯ ಜೋಶಿ ಸಾನ್ನಿಧ್ಯದಲ್ಲಿ ಬಲಭೀಮೇಶ್ವರ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿ ದೀಪಾಲಂಕಾರ ಮಾಡಲಾಗುವುದು.

ಸಂಜೆ ಭಕ್ತರಿಗೆ ಭಜ್ಜಿ, ರೊಟ್ಟಿ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. ಅಂದು ಇಡೀ ರಾತ್ರಿ ಖಾನಾಪೂರ, ಹೊನ್ನಳ್ಳಿ, ಕಡಕೋಳ,ಅರಳಗುಂಡಗಿ ಭಜನಾ ಮಂಡಳಿಯವರಿಂದ ಭಜನೆ ನಡೆಯಲಿದೆ ಎಂದು ಮುಖಂಡ ರುದ್ರಣ್ಣಸಾಹು ಮಾನಶೆಟ್ಟಿ, ಕಮಿಟಿ ಅಧ್ಯಕ್ಷ ರೇವಣಸಿದ್ದಸಾಹು ಕೋರವಾರ ಭಕ್ತರಲ್ಲಿ ಮನವಿ ಮಾಡಿದ್ದಾರೆ.

# ಡಿ.18 ರಂದು ಗೊಲ್ಲಾಳೇಶ್ವರ ಕಾರ್ತಿಕೋತ್ಸವ

**ಉದಯರಶ್ಮಿ ನ್ಯೂಸ್**



ಬ್ರಹ್ಮದೇವನಮಡು: ಸಿಂದಗಿ ತಾಲೂಕಿನ ಸುಕ್ಷೇತ್ರ ಗೋಲಗೇರಿಯ ಶ್ರೀ ಗೊಲ್ಲಾಳೇಶ್ವರ ಕಾರ್ತಿಕೋತ್ಸವ ಡಿ.18ರಂದು ನಡೆಯಲಿದೆ.

ದೇವಸ್ಥಾನದ ಧರ್ಮದರ್ಶಿ ವರಪುತ್ರ ಹೊಳೆಪ್ಪನವರು ದೇವರಮನಿ ಸಾನ್ನಿಧ್ಯದಲ್ಲಿ ಡಿ.18ರಂದು ಸೋಮವಾರ ಮಧ್ಯಾಹ್ನ ಗೊಲ್ಲಾಳೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ದೀಪಾಲಂಕಾರ ಮಾಡಲಾಗುವುದು. ಸಂಜೆ 7ಗಂಟೆಗೆ ದೀಪೋತ್ಸವ ನಂತರ ಗೊಲ್ಲಾಳೇಶ್ವರ ಪಲ್ಲಕ್ಕಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನ ಟ್ರಸ್ಟ್ ಕಾರ್ಯಾಧ್ಯಕ್ಷ ರವಿರಾಜ ದೇವರಮನಿ ಸದ್ಭಕ್ತರಲ್ಲಿ ಮನವಿ ಮಾಡಿದ್ದಾರೆ.

# ಡಾ.ವಿಷ್ಣುವರ್ಧನ್ ಬಗ್ಗೆ ಸರಕಾರದ ನಿರ್ಲಕ್ಷ್ಯ ಸಲ್ಲದು!

## ಕನ್ನಡಿಗರ ಕೂಗಾಗಿ, ಜನಾಂದೋಲನವಾಗಿ ಡಿ.17ರಂದು ಅಸಂಖ್ಯಾತ ಅಭಿಮಾನಿಗಳಿಂದ ಬೆಂಗಳೂರಿನಲ್ಲಿ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

– ಸಿದ್ಧಾಪುರ ಶಿವಕುಮಾರ್

ಡಾ.ವಿಷ್ಣುವರ್ಧನ್ ಬರೀ ಜನಪ್ರಿಯ ಅತ್ಯುತ್ತಮ ಕಲಾವಿದರಲ್ಲ, ಸಾಮಾಜಿಕ ಸೇವಕ ಚಿಂತಕರು, ಆಧಾ




ೄತ್ಮಶೀಲರು. ಬರೀ ತನ್ನ ಅಭಿನಯ ಭಾಷಣದ ಮೂಲಕ ಜನರಿಗೆ ಭೋದಿಸಿದವರಲ್ಲ. ತಕ್ಕಂತೆ ಬಾಳಿ ಬದುಕಿದವರು. ಕನ್ನಡ ಭಾಷೆ ನೆಲ ಜಲ ಬಗ್ಗೆ ಕಾಳಜಿಹೊಂದಿದವರು. ಹೆಣ್ಣುಕುಲವನ್ನು ಬರೀ ನಟನೆಯಿಂದ ಹಾಡಿ ಹೊಗಳದೇ ತನ್ನ ಆದ–ರ್ಶದ ಬದುಕಿನ ನಡೆತೆಯಿಂದಲೇ ಗೌರವಿಸುವುದನ್ನು ತೋರಿಸಿದವರು. ಒಬ್ಬ ಕಲಾವಿದ ಬೆಳೆಯಬೇಕಾದಾಗ ಕಿಡಿಗೇಡಿಗಳ ಕಿರುಕುಳ ಸಮಸ್ಯೆ ಸವಾಲುಗಳನ್ನು ಎದುರಿಸಿ ಬೆಳೆಯಬೇಕೆಂಬುದಕ್ಕೆ ಸ್ಪೂರ್ತಿ ಸಾಕ್ಷಿಯಾದವರು. ಪ್ರಶಸ್ತಿ ಪುರಸ್ಕಾರ ಸನ್ಮಾನಗಳ ಗೀಳಿಲ್ಲದೆ ಅದಕ್ಕಿಂತ ಮಿಗಿಲಾಗಿ ಅಭಿಮಾನವನ್ನು ಸಹಜವಾಗಿಯೇ ಸಂಪಾದಿಸಿದವರು. ಮಾನ ಅವಮಾನಗಳ ನಡುವೆ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಹೃದಯವಂತರಾದವರು. ತನ್ನ ಆದಾಯಕ್ಕಿಂತ ಅಧಿಕವಾಗಿ ಅಸಂಖ್ಯಾತ–ರಿಗೆ ದಾನ ಧರ್ಮಕ್ಕೆ ಯಾವುದೇ ಪ್ರಚಾರ ಬಯಸದೆ ಕೃತಿ ರೂಪದಲ್ಲಿ ಸಾಕ್ಷಿಯಾದವರು. ವಿಷ್ಣುವರ್ಧನ್ ಇಹಲೋಕ ತ್ಯಜಿಸಿ ಹದಿನಾಲ್ಕು ವರ್ಷಗಳೇ ದಾಟಿದರೂ ಅವರನ್ನು ಅಭಿಮಾನಿಸುವ ಗೌರವಿಸುವ ಸಂತನಂತೆ ಪೂಜಿಸುವವರ ಕ್ರೇಜ್ ಹೆಚ್ಚುತ್ತಲಿದೆ ವಿನಃ ಕಡಿಮೆಯಾಗುತ್ತಿಲ್ಲ ಆಗುವುದೂ



ಇಲ್ಲ!

ಅವರೊಬ್ಬ ಶ್ರೇಷ್ಠ ವ್ಯಕ್ತಿಯಾಗಿ ಅವ್ಯಕ್ತ ಜೀವಂತ ಶಕ್ತಿಯಾಗಿ ಪ್ರಭಾವಿಸುತ್ತಲೇ ಇದ್ದಾರೆ. ನೆನಪಿಡಿ, ಸ್ವಚ್ಚಂದ ಮನಸ್ಸಿನವರು ನಿಸ್ವಾರ್ಥ ಸೇವಾ ಕಾಳಜಿಯವರು ಮಾತ್ರವೇ ಹೀಗೆ ಅಸಾಧಾರಣವಾಗಿ ಬೆಳೆದು ಬೆಳಗಲು ಸಾಧ್ಯ. ಇಂತಹ ಅಸಂಖ್ಯಾತ ಅಭಿಮಾನಿಗಳ ಆರಾಧಕ ಶ್ರೇಷ್ಠ ವ್ಯಕ್ತಿಯನ್ನು ರಾಜ್ಯದ ರಾಜಧಾನಿಯಲ್ಲಿ ಪೂಜಿಸಲು ಪುಣ್ಯಭೂಮಿ ಬೇಕೆಂಬ ಬೇಡಿಕೆ ನ್ಯಾಯಸಮ್ಮತವೇ. ಇಂತಹ ನಾಡಿಗೆ ಕೀರ್ತಿ ತಂದ ಮಹನೀಯ ಸಾಧಕ ಶ್ರೇಷ್ಠ ಪ್ರಾತಃಸ್ಮರಣೀಯರನ್ನು ಸೂಕ್ತ ಗೌರವವನ್ನು ತೋರಿಸುವುದು ಘನ ಸರ್ಕಾರದ ಕರ್ತವ್ಯ. ಆದರೆ ಆರು ಜನ ಮುಖ್ಯಮಂತ್ರಿಗಳಿಂದಲೂ ಅಭಿಮಾನ ಸ್ಟುಡಿಯೋ ಪುಣ್ಯಭೂಮಿ ಸಮಸ್ಯೆಯನ್ನು ಸರಿಪಡಿಸುವ ಇಚ್ಚಾಸಕ್ತಿ ತೋರಿಸದೇ ಇರುವುದು ನಿಜವಾಗಿಯೂ ವಿಪರ್ಯಾಸವೇ. ಹೇಳಿ ಕೇಳಿ ಅಭಿಮಾನ ಸ್ಟುಡಿಯೋ ಕಲಾವಿದರಾದ ಬಾಲಣ್ಣನವರಿಗೆ ನೀಡಿದ ಸರ್ಕಾರದ ಅನುದಾನಿತ ಜಾಗವಾದ್ದರಿಂದ ಸರ್ಕಾರಕ್ಕಿದು ದೊಡ್ಡ ವಿಷಯವಲ್ಲ. ಅದೇ ಜಾಗದಲ್ಲಿ ಹಿರಿಯ ಮೇರು ನಟರಾದ ವಿಷ್ಣುವರ್ಧನ್ ಅವರಿಗೂ ಪುಣ್ಯಭೂಮಿಗಾಗಿ ನ್ಯಾಯಸಮ್ಮತವಾಗಿ ಹಂಚುವ ಇಚ್ಚಾಸಕ್ತಿ ಕೊರತೆ ಖಂಡಿತವಾಗಿ ಕಾಣುತ್ತಿದೆ. ಸರ್ಕಾರ ಈ ನಿಟ್ಟಿನಲ್ಲಿ ತನ್ನ ಜವಾಬ್ದಾ–ರಿಯನ್ನು ವಿಷ್ಣುವರ್ಧನ್ ಅವರ ಬಗ್ಗೆ ತಕ್ಕದಾಗಿ ತೋರಿಸದೇ ತಮಗೆ ತಾವೇ ಅವಮಾನ ಮಾಡಿಕೊಳ್ಳುತ್ತಿದೆ. ಜೊತೆಗೆ ತಾರತಮ್ಯವನ್ನು ಮೈ ಮೇಲೆ ಎಳೆದುಕೊಂಡಂತೆ ಕಂಡಿದ್ದ–ರಿಂದಲೇ ಸತತ ಸಹನೆಯ ಹೋರಾಟ ನಂತರ ಇದೀಗ ನಾಡಿನಾದ್ಯಂತ ಖಂಡಿಸಲೆಂದೇ ಕನ್ನಡಿಗರ ಕೂಗಾಗಿ ಜನಾಂದೋಲನವಾಗಿ ಇದೇ ಭಾನುವಾರ 17 ಬೆಂಗಳೂರಿನಲ್ಲಿ ಪ್ರತಿಭಟನೆಗೆ ಮುಂದಾಗಿದೆ. ನಮ್ಮ ನಾಡಿನ ಸುಪುತ್ರ ಕನ್ನಡಕ್ಕೆ ಕನ್ನಡನತನಕ್ಕೆ ಕೀರ್ತಿ ತಂದ ಮೇರು ಕಲಾವಿದರಾಗಿ ಜೊತೆಗೆ ಸಾಮಾಜಿಕ ಸೇವಾ ಕಾಳ–ಜಿಗೆ ಸಾಕ್ಷಿಯಾದ ಹೃದಯವಂತ




ವಿಷ್ಣುವರ್ಧನ್ ಅವರ ವಿಷಯದಲ್ಲಿ ಸರ್ಕಾರ ಹೀಗೆ ನಡೆದುಕೊಳ್ಳಬಾರದಿತ್ತು. ಇದನ್ನು ಪ್ರಶ್ನಿಸುವುದರಲ್ಲಿ ಪ್ರತಿಯೊಬ್ಬ ಕನ್ನಡಿಗರ ಅಭಿಮಾನಿಗಳ ಹಕ್ಕು ಇದೆ. ಇದಕ್ಕಾಗಿ ನಾಡಿನಾದ್ಯಂತ ಅಭಿಮಾನದ ನಿಸ್ವಾರ್ಥ ಮನಸ್ಸುಗಳು ಮಹಿಳೆಯರು, ಚಿಕ್ಕ ಮಕ್ಕಳು, ವಯೊವೃದ್ಧರು, ಜಾತಿ ಕುಲ ಗೋತ್ರ ಬೇಧಗಳಿಲ್ಲದೆ ಪುಣ್ಯಭೂಮಿ ಪಡೆದೇ ತೀರಲು ಹಗಲಿರುಳು ಶ್ರಮಿಸುತ್ತಿವೆ. ಜೊತೆಗೆ ಮುಖ್ಯವಾಗಿ ನಾಡಿನ ಹಲವಾರು ಹೋರಾಟಗಳ ಸಂಘ ಸಂಘಟಕ ಸಮಿತಿಯವರು ವಿಷ್ಣುವರ್ಧನ್ ಅವರ ಪರವಾಗಿ ಅಭಿಮಾನದಿಂದ ಕೈಜೋಡಿಸಿದ್ದು ನಿಜವಾಗಿಯೂ ಸ್ವಾಗತಾರ್ಹ ಹಾಗೂ ಅಭಿನಂದನೀಯ. ಈ ಬಾರಿ ಸರ್ಕಾರದ ಕಣ್ತೆರೆಯಲಿ ಸಮಸ್ತ ಕನ್ನಡಿಗರ ಒಕ್ಕೊರಲಿನ ಕೂಗಿಗೆ ಪುಣ್ಯಭೂಮಿ ಸತ್ಕಾರ್ಯಕ್ಕೆ ಜಯ ಸಿಗಲಿ.

# ಹೆಸ್ಕಾಂ: ಕುಂದುಕೊರತೆ ಸಭೆ ಇಂದು

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ದಿ: 16 ರಂದು ಶನಿವಾರ ಬೆಳಿಗ್ಗೆ 10 ಘಂಟೆಗೆ ದೇವರಹಿಪ್ಪರಗಿ ಇಂಡಿ ರಸ್ತೆಯಲ್ಲಿಯ ಹೆಸ್ಕಾಂ ಉಪವಿಭಾಗೀಯ ಕಚೇ–ರಿಯಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕಿನ ಎಲ್ಲಾ ಗ್ರಾಹಕರು ಸಭೆಗೆ ಆಗಮಿಸಿ ತಮ್ಮ ಕುಂದುಕೊರತೆಗಳನ್ನು ವ್ಯಕ್ತಪಡಿಸಿ ಪರಿಹಾರ ಕಂಡುಕೊಳ್ಳಬೇಕೆಂದು ಕಾರ್ಯ ಮತ್ತು ಪಾಲನೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

# ಡಿ.18 ರಂದು ರಂಭಾಪುರಿ ಶ್ರೀ ಅಡ್ಡಪಲ್ಲಕ್ಕಿ ಮಹೋತ್ಸವ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಶ್ರೀವೀರಭದ್ರೇಶ್ವರ ದೇವರ ನೂತನ ಮೂರ್ತಿ ಪ್ರಾಣ ಪ್ರತಿಷ್ಠಾಪನೆಯ ಹನ್ನೊಂದನೆಯ ವರ್ಷದ ಕಾರ್ತಿಕೋತ್ಸವ ಹಾಗೂ ದೀಪೋತ್ಸವದ ಅಂಗವಾಗಿ ಶ್ರೀ ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಮಹೋತ್ಸವ ದಿ:18 ಸೋಮವಾರದಂದು ಜರುಗಲಿದೆ.

ಪಟ್ಟಣದ ಬಿ.ಎಲ್.ಡಿ.ಇ ಪ್ರೌಢಶಾಲಾ ಆವರಣದಿಂದ ಮಧ್ಯಾಹ್ನ 3 ಗಂಟೆಗೆ ಕುಂಭ, ಕಳಸ, ವಾದ್ಯ ವೈಭವಗಳೊಂದಿಗೆ ಆರಂಭಗೊಳ್ಳುವ ಮಹೋತ್ಸವ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ವೀರಭದ್ರೇಶ್ವರ ದೇವಸ್ಥಾನ ತಲುಪುವುದು. ನಂತರ 7 ಗಂಟೆಗೆ ಧರ್ಮಸಭೆ ಆರಂಭಗೊಳ್ಳಲಿದೆ.

ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧರ್ಮಸಭೆಯಲ್ಲಿ ಸಿಂದಗಿ, ದೇವರಹಿಪ್ಪರಗಿ, ದೇವೂರ, ಬಸವನ ಬಾಗೇವಾಡಿ, ಕರ್ನ್ಹೋಳ್ಳಿ, ಕೊಕಟನೂರ, ಕನ್ನೂರ, ಚಿಮ್ಮಲಗಿ, ತಾಳಿಕೋಟಿ ಮಠಗಳ ಶ್ರೀಗಳು, ಪೂಜ್ಯರು, ಸ್ಥಳೀಯ ಮತ್ತು ಸಿಂದಗಿ ಮತಕ್ಷೇತ್ರಗಳ ಶಾಸಕರು, ಮಾಜಿಶಾಸಕರು, ರಾಜಕೀಯ ಧುರೀಣರು ಸೇರಿದಂತೆ ಪಟ್ಟಣದ ಪ್ರಮುಖರು ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸದ್ಭಕ್ತರು ಭಾಗವಹಿಸಿ ಶ್ರೀಗಳ ಕೃಪೆಗೆ ಪಾತ್ರರಾಗುವುದರ ಜೊತೆಗೆ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೇವಾ ಸಮೀತಿ ಪ್ರಕಟಣೆ ಮೂಲಕ ತಿಳಿಸಿದೆ.

# ಸಮಗ್ರ ಚಿಂತನೆ + ಸಮಷ್ಟಿ ಪ್ರಜ್ಞೆ = 360ಲಿ ಡಿಗ್ರಿ ದೃಷ್ಟಿಕೋನ

ಸೋಷಿಯಲ್ ಮೀಡಿಯಾದಲ್ಲಿ ರಾಜಕೀಯ ಧಾರ್ಮಿಕ ಸಾಮಾಜಿಕ ಮತ್ತು ಇತರ ವಿಷಯಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಗೆಳೆಯ ಗೆಳತಿಯರಲ್ಲಿ ಒಂದು ವಿನಯ ಪೂರ್ವಕ ಮನವಿ..

ನಾವು ವ್ಯಕ್ತಪಡಿಸುವ ಅಭಿಪ್ರಾಯದ ನ್ಯಾಯ ದಂಡ ಎಲ್ಲಾ ಕಾಲಕ್ಕೂ, ಎಲ್ಲಾ ಸಂದರ್ಭ ಗಳಿಗೂ,

ಎಲ್ಲಾ ವಿಷಯಗಳಿಗೂ ಒಂದೇ ರೀತಿಯಲ್ಲಿ ಮತ್ತು ನಿಷ್ಪಕ್ಷಪಾತವಾಗಿ ಇರಲಿ..


ಅತಿಮುಖ್ಯ ಎಂದರೆ ನಮ್ಮ ನ್ಯಾಯ ದಂಡವೇ ಸಮಗ್ರ ಚಿಂತನೆಯ 360ಲಿ ಡಿಗ್ರಿ ಕೋನದ ಸಮಷ್ಟಿ ಪ್ರಜ್ಞೆಯ ಚಿಂತನೆಯಲ್ಲಿ ಮಾಡಿರಬೇಕು. ಆಗ ಮಾತ್ರ ನ್ಯಾಯ ತೀರ್ಮಾನ ಮಾಡಲು ಸಾಧ್ಯ. ಅರಿವೇ ಇಲ್ಲದ ವಿಷಯಗಳ ಬಗ್ಗೆ ಒಂದು ಅನುಮಾನದ ಅವಕಾಶಕ್ಕೆ ಜಾಗ ಕಲ್ಪಿಸಿರಬೇಕು. ಸ್ಪಷ್ಟತೆಯ ಹೆಸರಿನಲ್ಲಿ ಆತ್ಮವಂಚನೆ ಮಾಡಿಕೊಳ್ಳಬಾರದು..




**ಉದಯರಶ್ಮಿ ದಿನಪತ್ರಿಕೆ**

ಕಾಂಗ್ರೆಸ್ ಅಥವಾ ಬಿಜೆಪಿ ಅಥ–ವಾ ಕಮ್ಯುನಿಸ್ಟ್ ಅಥವಾ ಬಿಎಸ್ಪಿ ಅಥವಾ ಜೆಡಿಎಸ್ ಅಥವಾ ಎಎಪಿ ಅಥವಾ ಇನ್ಯಾವುದೇ ಪಕ್ಷವಾಗಿರಲಿ ಅದನ್ನು ಬೆಂಬಲಿಸುವ ಅಥವಾ ವಿರೋಧಿಸುವ ಅಥವಾ ಸಮರ್ಥಿಸುವ ಮಾನದಂಡಗಳು ಯಾವಾಗಲೂ ಈ ನ್ಯಾಯ ದಂಡದ ಅಡಿಯಲ್ಲಿಯೇ ಇರಬೇಕು..

ಮನುವಾದವೇ ಇರಲಿ, ಗಾಂಧಿ




ಅಂಬೇಡ್ಕರ್ ಮಾರ್ಕ್ಸ್ ನಕ್ಸಲಿಸಂ ಮುಂತಾದ ವಾದಗಳೇ ಇರಲಿ ನಮ್ಮ ನ್ಯಾಯ ದಂಡ ಒಂದೇ ರೀತಿಯಾಗಿರಬೇಕು..

ಹಿಂದೂ ಇಸ್ಲಾಂ ಕ್ರಿಶ್ಚಿಯನ್ ಸಿಖ್ ಬೌದ್ಧ ಜೈನ ಲಿಂಗಾಯತ ಇತ್ಯಾದಿ ಯಾವುದೇ ಧರ್ಮವಾಗಿರಲಿ ಅದನ್ನು ಮೆಚ್ಚುವ ಅಥವಾ ಆರಾಧಿಸುವ ಅಥವಾ ಅದನ್ನು ಟೀಕಿಸುವ




ನ್ಯಾಯ ದಂಡವೂ ಸಹ ಎಲ್ಲಾ ಅಭಿಮಾನ ಭಕ್ತಿಗಳನ್ನು ಮೀರಿ ಒಂದೇ ರೀತಿಯ ನ್ಯಾಯ ದಂಡ ಉಪಯೋಗಿಸಬೇಕು..

ಕೇವಲ ಇಷ್ಟೇ ಅಲ್ಲ. ಯಾವ ನ್ಯಾಯ ದಂಡದ ಅಡಿಯಲ್ಲಿ ನಾವು ನಮ್ಮ ತಾಯಿ ತಂದೆ ತಂಗಿ ಅಣ್ಣ ಹೆಂಡತಿ ಗಂಡ ಮಕ್ಕಳನ್ನು ತರುತ್ತೇವೆಯೋ ಅದೇ ಮಾನದಂಡ



ಇತರ ಎಲ್ಲಾ ನಮ್ಮ ಜನರಿಗೂ ಅನ್ವಯಿಸಬೇಕು. ಮಗಳಿಗೆ ಒಂದು ಸೊಸೆಗೆ ಒಂದು, ಅತ್ತೆ ಮಾವನಿಗೆ ಒಂದು, ತಂದೆ ತಾಯಿಗೆ ಒಂದು ಹೀಗೆ ಬೇರೆ ಬೇರೆ ನ್ಯಾಯ ದಂಡ ಉಪಯೋಗಿಸಬಾರದು..

ಸ್ವಜನ ಪಕ್ಷಪಾತ ಕೂಡ ಒಂದು ರೀತಿಯ ಭ್ರಷ್ಟಾಚಾರ..

ನರೇಂದ್ರ ಮೋದಿಯೋ, ರಾಹುಲ್ ಗಾಂಧಿಯೋ, ಮಾಯಾವತಿಯೋ, ಮಮತಾ ಬ್ಯಾನರ್ಜಿಯೋ ಇನ್ಯಾರೋ ಮಾಡಿದ್ದೆಲ್ಲವೂ ಸರಿ ಎನ್ನಬೇಡಿ. ನಮ್ಮ ಮೊದಲ ಮತ್ತು ಕೊನೆಯ ಆಶಯ ಭಾರತೀಯತೆ ಮತ್ತು ಮಾನವೀಯತೆಯೇ ಆಗಿರಲಿ. ವ್ಯಕ್ತಿಗಳು ಶಾಶ್ವತವಲ್ಲ. ಸಿದ್ದಾಂತಗಳು ಶಾಶ್ವತವಲ್ಲ, ಧರ್ಮಗಳು ಶಾಶ್ವತವಲ್ಲ.

ಆದರೆ ಕಾಲದೊಂದಿಗೆ ನ್ಯಾಯದ ಮತ್ತು ಸತ್ಯದ ಮಾನದಂಡ ಬದಲಾಗಬಹುದು. ಆದರೆ ನ್ಯಾಯ ಮತ್ತು ಸತ್ಯ ಮಾತ್ರ ಈ ಜಗತ್ತು ಇರುವವರೆಗೂ ಇದ್ದೇ ಇರುತ್ತದೆ..

ನಾವು ಮಾನಸಿಕವಾಗಿ ಈ ರೀತಿಯ ನಿಷ್ಪಕ್ಷಪಾತ ನ್ಯಾಯ ದಂಡವನ್ನು ಉಪಯೋಗಿಸಿದ್ದೇ ಆದರೆ ನಮ್ಮ ಜ್ಞಾನದ ಮಟ್ಟ ಖಂಡಿತ ಉತ್ತಮ ಮಟ್ಟಕ್ಕೆ ಏರಿ ನಮ್ಮ ಜೀವನದ ಗುಣಮಟ್ಟ ಮೇಲ್ದರ್ಜೆಗೆ ಏರುತ್ತದೆ. ಇಲ್ಲದಿದ್ದರೆ ನಾವು ಜೀವನದ ಇನ್ನೊಂದು ಮುಖವನ್ನು ಕಾಣದೆ ಆ ಅನುಭವದಿಂದ ವಂಚಿತರಾಗುತ್ತೇವೆ..

ನಾವು ತಿಳಿದಿರುವ ವಿಷಯದ ಸಂಪೂರ್ಣ ಅರಿವು ನಮಗೆ ಆಗಬೇಕಿದ್ದರೆ ನಾವು ಮನುಸ್ಮೃತಿಯನ್ನು ತಿಳಿಯಬೇಕು, ಅಂಬೇಡ್ಕರ್ ಅವರನ್ನು ಓದಬೇಕು ಗಾಂಧಿ ಮಾರ್ಕ್ಸ್ ಗಳನ್ನು ಬುದ್ದ ಬಸವ ಮಹಾವೀರ ವಿವೇಕಾನಂದ ಪೈಗಂಬರ್ ಜೀಸಸ್ ಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು..

ಒಮ್ಮೆ ಬ್ರಾಹ್ಮಣನಾಗಿ ಯೋಚಿಸು ಅದೇ ಸಮಯದಲ್ಲಿ ಅಸ್ಪೃಶ್ಯನಾಗಿಯೂ ಅನುಭವಿಸು. ಆಗ ನಿನಗೆ ಎರಡೂ ವಿಷಯಗಳ ಮೇಲು ಕೀಳಿನ ಒಳ ನೋಟ ಸಿಗುತ್ತದೆ. ಆಗ ನ್ಯಾಯದ



ದಂಡ ಉಪಯೋಗಿಸಿ ಅಭಿಪ್ರಾಯ ವ್ಯಕ್ತಪಡಿಸು. ಕನಿಷ್ಠ ವಾಸ್ತವದ ಹತ್ತಿರ ನೀ ಬರಬಲ್ಲೆ. ಜ್ಞಾನದ ಸವಿಯನ್ನು ಸವಿಯಬಲ್ಲೆ..

ಸಾಧ್ಯವಾದಷ್ಟು ಇದನ್ನು ಪ್ರಯತ್ನಿಸಿ ನೋಡಿ.

ಇಸಂಗಳಿಲ್ಲದ ನಿಷ್ಪಕ್ಷಪಾತ ಅಭಿಪ್ರಾಯ ನಮಗೂ, ಸಮಾಜ–ಕ್ಕೂ, ದೇಶಕ್ಕೂ ಈ ಸೋಷಿಯಲ್ ಮೀಡಿಯಾ ಅಬ್ಬರದಲ್ಲಿ ಅತ್ಯವಶ್ಯ ಎನಿಸುತ್ತದೆ..



# ಡಿ.17 ರಂದು ವೆಂಕಟೇಶ್ವರ ಜಾತ್ರಾ ಮಹೋತ್ಸವ

**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ತಾಲ್ಲೂಕಿನ ಮಣೂರ ಗ್ರಾಮದ ವೆಂಕಟೇಶ್ವರ ಜಾತ್ರಾ ಮಹೋತ್ಸವ ಡಿ.17 ರಂದು ಭಾನುವಾರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆ.

ದೇವಸ್ಥಾನದ ಆವರಣದಲ್ಲಿ ಜರುಗುವ ಮಹೋತ್ಸವದಲ್ಲಿ ಬೀದರ ಚಿದಂಬರ ಆಶ್ರಮದ ಡಾ.ಶಿವಕುಮಾರ ಸ್ವಾಮೀಜಿ, ವೀರಗೋಟ ಅಡವಿಲಿಂಗ ಮಹಾರಾಜರು, ವಿಜಯಪುರ ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ, ದೇವೂರ ಹಿರೇಮಠದ ಮರುಳಾರಾಧ್ಯಶ್ರೀಗಳು, ಬಾಲಗಾವಿ ಗುರುದೇವ ಆಶ್ರಮದ ಅಮೃತಾನಂದ ಸ್ವಾಮೀಜಿ ಸೇರಿದಂತೆ ಸಂಸದರು, ಸ್ಥಳೀಯ ಹಾಗೂ ಸಿಂದಗಿ ಮತಕ್ಷೇತ್ರಗಳ ಶಾಸಕರು ಭಾಗವಹಿಸಲಿದ್ದಾರೆ.

ಶ್ರೀವೆಂಕಟೇಶ್ವರ ದೇವಸ್ಥಾನ ಸೇವಾ ಸಮೀತಿಯ ಅಧ್ಯಕ್ಷ ಎಲ್. ಆರ್.ಅಂಗಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಕೊನೆಯಲ್ಲಿ ಮಹಾಪ್ರಸಾದ ಜರುಗುವುದು ಎಂದು ದೇವಸ್ಥಾನದ ಸೇವಾ ಸಮೀತಿ ಪ್ರಕಟಣೆ ಮೂಲಕ ತಿಳಿಸಿದೆ.

# ನ್ಯಾಯ–ನೀತಿ–ಧರ್ಮ ಬಿಟ್ಟು ಬದುಕಬಾರದು



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಶಕ್ತಿ ಸಾಮರ್ಥ್ಯ ಇದ್ದ ವ್ಯಕ್ತಿ ಎಂದಿಗೂ ನ್ಯಾಯ, ನೀತಿ, ಧರ್ಮವನ್ನು ಬಿಡಬಾರದು ಎಂದು ಹಾರ್ವರ್ಡ್ ಪಿ.ಯು.ಸೈನ್ಸ್ ಕಾಲೇಜಿನ ಅಧ್ಯಕ್ಷ ಎಸ್.ಎಮ್.ನೆರಬೆಂಚಿ ಹೇಳಿದರು.

ಪಟ್ಟಣದ ಹೊರವಲಯದಲ್ಲಿ ನಾಲತವಾಡ ರಸ್ತೆಯಲ್ಲಿರುವ ಹಾರ್ವರ್ಡ್ ಪಿ.ಯು.ಸೈನ್ಸ್ ಕಾಲೇಜಿನಲ್ಲಿ, ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಯತಿವರೇಣ್ಯರಾದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮೀಜಿ ಆಯೋಜಿಸಿರುವ ಭಗವದ್ಗೀತಾ ಅಭಿಯಾನ ಕರ್ನಾಟಕ–2023ರ ತಾಲೂಕು ಮಟ್ಟದ ಸಪ್ತಾಹದ 6ನೇ ದಿನದ ಉಪನ್ಯಾಸಮಾಲಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭೂಮಿಗೆ ಬಂದ ಪ್ರತಿಯೊಬ್ಬ ಮನುಷ್ಯನಿಗೂ ಅಂತ್ಯವೆಂಬ ಸತ್ಯವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಹಣಬಲ, ತೋಳ್‌ಬಲ ಇದೆ ಅಂದ ಮಾತ್ರಕ್ಕೆ ನ್ಯಾಯ, ನೀತಿ ಮತ್ತು ಧರ್ಮವನ್ನು ಬಿಟ್ಟು ಬದುಕಬಾರದು ಎಂದು ಭಗದ್ಗೀತೆಯ ಪ್ರತಿಯೊಂದು ಅಧ್ಯಾಯಗಳು ಹೇಳುತ್ತವೆ. ನಮ್ಮ ಶಕ್ತಿ ಸಾಮಥ–ರ್ಯವನ್ನು ಸಾಧ್ಯವಾದಷ್ಟು ಒಳ್ಳೆಯ ಕಾರ್ಯಗಳಿಗೆ ಉಪಯೋಗಿಸಬೇಕು ಎಂದರು.

ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಎಸ್.ಬಿ.ಚಲವಾದಿ, ನಿವೃತ್ತ ಮುಖ್ಯಗುರು ಎಸ್.ಎಚ್.ಮುದ್ನಾಳ, ನಿವೃತ್ತ ಖಾದಿ ಗ್ರಾಮೋದ್ಯೋಗ ಕೇಂದ್ರದ ನೌಕರರಾದ ಕೆ.ಎಸ್. ಕುಲಕರ್ಣಿ ಮಾತನಾಡಿ, ಎಲ್ಲರ ಆತ್ಮದ ತೃಷೆಯನ್ನು ತಣಿಸುವ ಸಾಮರ್ಥ್ಯವಿರುವುದು ಪರಮಾತ್ಮನ ವಾಣಿಯಾದ ಭಗವದ್ಗೀತೆಯಿಂದ ಮಾತ್ರ ಸಾಧ್ಯ. ಸರ್ವರ ಆತ್ಮದ ವೇದನೆಯನ್ನು ತಣಿಸುವ ಸಾಮರ್ಥ್ಯವನ್ನು ಹೊಂದಿದವನಿಗೆ ಮಾತ್ರವೇ ಪರಮಾತ್ಮನೆಂದು ಕರೆಯುತ್ತಾರೆ. ಅಂತಹ ಪರಮಾತ್ಮನೆಂದು ಕರೆಯಿಸಿಕೊಂಡ ಕೃಷ್ಣನ ಮುಖವಾಣಿಯಾದ ಭಗವದ್ಗೀತೆಯಲ್ಲಿ ಎಲ್ಲವೂ ಇದೆ. ಅದು ಮನುಕುಲದ ಉದ್ಧಾರಕ್ಕಾಗಿಯೇ ಇರುವಂತಹದ್ದಾಗಿದೆ. ವೇದವನ್ನು ಓದಿದ ಮಾತ್ರಕ್ಕೆ ದೊಡ್ಡವನಾಗುವುದಿಲ್ಲ. ಇನ್ನೊಬ್ಬರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸಿ ಸಹಾಯಮಾಡುವ ಸ್ವಭಾವ ಇರಬೇಕು. ಸಂಪತ್ತನ್ನಾಗಲಿ ಗೌರವವನ್ನಾಗಲಿ ಕೊಡುವುದನ್ನು ಕಲಿಯಬೇಕು. ಧರ್ಮ ಮಾರ್ಗದಲ್ಲಿ ನಡೆದಾಗಲೇ ಜ್ಞಾನ ಸಂಪಾದನೆಗೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಾಚಾರ್ಯೆ ರಾಜಶ್ರೀ ರೂಢಗಿ. ಉಪನ್ಯಾಸಕರಾದ ಇಮಾಂಬು ಗಂಗೂರ, ಸಿ.ಎಸ್.ಪಾಟೀಲ್, ದಾನಪ್ಪ ಹೊಸಮನಿ ಸೇರಿದಂತೆ ಇತರರು ಹಾಜರಿದ್ದರು.

ಜ್ಞಾನ ಭಾರತಿ ವಿದ್ಯಾ ಮಂದಿರದ ಗೀತ ಗಾಯನ ತಂಡದವರು ಗುರುಮಾತೆ ರಂಜಿತಾ ಹೆಗಡೆ ನೇತೃತ್ವದಲ್ಲಿ ಸಾಮೂಹಿಕವಾಗಿ ಭಗವದ್ಗೀತೆಯ 10ನೇ ಅಧ್ಯಾಯವನ್ನು ಪಠಿಸಿದರು.

ಉಪನ್ಯಾಸಕ ಬಿ.ಆರ್.ಬೆಳ್ಳಿಕಟ್ಟಿ ಸ್ವಾಗತಿಸಿ ನಿರ್ವಹಿಸಿದರು. ಸಂಚಾಲಕ ರಾಮಚಂದ್ರ ಹೆಗಡೆ ಆಶಯದ ನುಡಿಗಳನ್ನಾಡಿದರು.